RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಚನ್ನು ಸ್ಟೀಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೆಂಟ್ಸ್ ಸ್ಪೇಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಎಸ್‌ಐಆರ್ ಮೂಲಕ ಮತದಾನದ ಹಕ್ಕು ಕಸಿಯುವ ಯತ್ನ: ಲಮಾಣಿ » 2

ಸೌಲಭ್ಯ ನೀಡಲು ಹಿಂದೇಟು: ಸಚಿವರ ಮನೆ ಎದುರು ಪ್ರತಿಭಟನೆಗೆ ಸಿದ್ಧತೆ » 3

ಬೇಕಿನ ಬೆನ್ನೇರಿ, ಬೇಡದ ಬದುಕಿನೊಳಗೆ! » 4

ಸಂಪುಟ(Volume): 1 ಸಂಚಿಕೆ (Issue): 86 ● ಪುಟ (Page): 4 ● ದರ: Rs. 4 ಗುರುವಾರ 8 ಅಕ್ಟೋಬರ್ 2026 ● 8 OCTOBER 2026

● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ರಸ್ತೆ ಬದಿಯ ಮರಗಳ ಕಡಿತ: ಗ್ರಾಮಸ್ಥರಿಂದ ಕ್ರಮಕ್ಕೆ ಆಗ್ರಹ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:** ತಾಲೂಕಿನ ಸೂಡಿ –ಕಳಕಾಪೂರ ರಸ್ತೆಯ ಬದಿಯಲ್ಲಿ ಹಲವು ವರ್ಷಗಳಿಂದ ಬೆಳೆದು ನಿಂತಿದ್ದ ಮರಗಳನ್ನು ಕಡಿದು ತೆರವುಗೊಳಿಸಿರುವ ಕುರಿತು ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿದ್ದು, ಈ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.

ರಸ್ತೆಯ ಬದಿಯಲ್ಲಿ ಸುಮಾರು 15 ವರ್ಷಗಳಿಂದ ಬೆಳೆದು ನಿಂತಿ–ದ್ದ ಮರಗಳನ್ನು ಇತ್ತೀಚೆಗೆ ಕಡಿದು ತೆರವುಗೊಳಿಸಲಾಗಿದೆ. ಈ ಕುರಿತು ಸುಮಾರು ಒಂದು ತಿಂಗಳ ಹಿಂದೆಯೇ ಸೂಡಿ ಗ್ರಾಮದ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಮರಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರು ಎನ್ನಲಾಗಿದೆ.

ಈಕುರಿತುಅರಣ್ಯಇಲಾಖೆಅಧಿಕಾರಿಮಧುಹಳ್ಳಿಹಾಳಮಾತನಾಡಿ, "ರಸ್ತೆ ಬದಿಯ ಮರಗಳನ್ನು ಕಡಿದಿರುವ ಕುರಿತು ಇಲಾಖೆಯಿಂದ ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗಿದೆ.ಗ್ರಾಮಸ್ಥರ ಮನವಿಯನ್ನು ಮೇಲಾಧಿಕಾರಿಗಳಗಮನಕ್ಕೆತಂದುಅರಣ್ಯಸಂರಕ್ಷಣಾಕಾಯ್ದೆಯಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಡಿದು ಹಾಕಿರುವ ಮರಗಳ ಸಂಖ್ಯೆ, ಮರಗಳ ಸ್ವರೂಪ ಹಾಗೂ ಅವುಗಳನ್ನು ತೆರವುಗೊಳಿಸಿರುವ ಕಾರಣದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ರಸ್ತೆ ಬದಿಯ ಮರಗಳನ್ನು ಉಳಿಸುವುದು ಅಗತ್ಯವಾಗಿದ್ದು, ಕಡಿದು ಹಾಕಿರುವ ಮರಗಳ ಬದಲಿಗೆ ಹೊಸ ಸಸಿಗಳನ್ನು ನೆಟ್ಟು ಬೆಳೆಸಲು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇದೇ ಸಂದರ್ಭದಲ್ಲಿ ಶಂಕರಗೌಡ ಪಾಟೀಲ, ಕುಮಾರ ಮಾರನಬಸರಿ ರಾಜೂ ಶೆಟ್ಟರ, ಸತೀಶ ಉಗಲಾಟದ, ಸುನೀಲ ಮಾರನಬಸರಿ, ನವೀನ ಹೆಬ್ಬಾರಿ, ಬಸಲಿಂಗಪ್ಪ ಕೊಟಗಿ, ದಾದಾಖಲಂದರ ಮೊಕಾಶಿ, ಪ್ರಜ್ವಲ ಮಲಕಸಮುದ್ರಮಠ, ಬಸಯ್ಯ ಬಿಕ್ಷಾವತಿಮಠ, ರವಿ ತಿಪಶೆಟ್ಟಿ, ಸಂಗಮೇಶ ಮಾರಬಸರಿ ಸೇರಿದಂತೆ ಇತರರು ಇದ್ದರು



### ರಾಜ್ಯ ಸರ್ಕಾರದ ವಿರುದ್ಧ ಬಿ.ವೈ. ವಿಜಯೇಂದ್ರ ಗಂಭೀರ ಆರೋಪ

## ಭ್ರಷ್ಟಾಚಾರ, ಡೀಲ್‌ಗಳ ಕುರಿತು ಸಿಎಂ ಸತ್ಯ ಬಹಿರಂಗಪಡಿಸಲಿ: ವಿಜಯೇಂದ್ರ ಆಗ್ರಹ

**ಸತ್ಯಮಿಥ್ಯ ಸುದ್ದಿಮೂಲ ಗದಗ:** ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹಲವು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಚಿವರಿಗೆ ಲಂಚ ನೀಡುವ ವಿಚಾರದಲ್ಲಿ ಮೊಬೈಲ್‌ಗಳನ್ನು ಹೊರಗಿಟ್ಟು, ಬಾಗಿಲು ಹಾಕಿಕೊಂಡು ವ್ಯವಹಾರ ನಡೆಸುವಂತೆ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಸ್ಟಿಂಗ್ ಆಪರೇಷನ್‌ಗಳ ಚರಿತ್ರೆ ಯಾರದ್ದು ಎನ್ನುವುದು ರಾಜ್ಯದ ಜನರಿಗೆ ಹಾಗೂ ಕಾಂಗ್ರೆಸ್ ಶಾಸಕರಿಗೆ ಗೊತ್ತಿದೆ. ಆಡಳಿತ ಪಕ್ಷದ ಶಾಸಕ ಎಚ್.ಕೆ. ಪಾಟೀಲರನ್ನೇ ಕೇಳಿದರೆ ಈ ಕುರಿತು ಅವರೇ ಹೇಳುತ್ತಾರೆ ಎಂದು ವಿಜಯೇಂದ್ರ ಹೇಳಿದರು.

ಇದೇವೇಳೆ,ಸರ್ಕಾರದಪ್ರಭಾವಿನಾಯಕನೊಬ್ಬ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಕರೆಸಿಕೊಂಡು, ಮೊಬೈಲ್ ಸ್ವಿಚ್ ಆಫ್ ಮಾಡಿಸಿ ಒಳಗೆ ಕೂರಿಸಿಕೊಂಡು ಹಣದ ಡೀಲ್‌ಗೆ ಒತ್ತಾಯಿಸಿದ್ದಾರೆ ಎಂಬ ಮತ್ತೊಂದು ಆರೋಪವನ್ನು ಅವರು ಮಾಡಿದರು.

ಈ ಹಿಂದೆ ₹75 ನೀಡುತ್ತಿದ್ದೀರಿ, ಇನ್ನು ಮುಂದೆ ₹150 ನೀಡಬೇಕು ಎಂದು ಪ್ರಭಾವಿ ನಾಯಕರು ಉದ್ಯಮಿಗೆ ಕೇಳಿದ್ದಾರೆ. ಅಷ್ಟೊಂದು ಹಣ ನೀಡಲು ಸಾಧ್ಯವಿಲ್ಲ ಎಂದು ಉದ್ಯಮಿ ಹೇಳಿದಾಗ, ಹಾಗಾದರೆ ರಾಜ್ಯ ಬಿಟ್ಟು ಹೋಗಿ ಎಂದು ಎಚ್ಚರಿಕೆ ನೀಡಲಾಗಿದೆ ಎಂದು ವಿಜಯೇಂದ್ರ ಆರೋಪಿಸಿದರು.

ಈ ಆರೋಪಗಳ ಕುರಿತು ಮುಖ್ಯಮಂತ್ರಿ ಸತ್ಯವನ್ನು ರಾಜ್ಯದ ಜನರ ಮುಂದೆ ಬಹಿರಂಗಪಡಿಸಬೇಕು. ಇಂತಹ ಡೀಲ್ ನಡೆಸಿದವರು ಯಾರು ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಇದ–ರಿಂದ ರಾಜ್ಯದ ಜನರಿಗೆ ಹಾಗೂ ಉದ್ಯಮಿಗಳಿಗೆ ವಾಸ್ತವಾಂಶ ತಿಳಿಯಲಿದೆ ಎಂದು ಅವರು ಒತ್ತಾಯಿಸಿದರು.

ಏಜೆನ್ಸಿಗಳನ್ನು ಸಾಕಿಕೊಂಡಿರುವವರು ಯಾರು ಎಂಬುದನ್ನೂ ಮುಖ್ಯಮಂತ್ರಿಗಳೇ ಸ್ಪಷ್ಟಪಡಿಸಬೇಕು. ಸರ್ಕಾರದ ಪ್ರಭಾವಿ ನಾಯಕನಿಂದ ನಡೆದಿದೆ ಎನ್ನಲಾದ ಡೀಲ್ ಕುರಿತು ಮುಖ್ಯಮಂತ್ರಿ ಮೊದಲು ಸ್ಪಷ್ಟನೆ ನೀಡಲಿ ಎಂದು ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಸಿ. ಪಾಟೀಲ, ಬಿಜೆಪಿ ಮುಖಂಡರಾದ ಅನಿಲ ಮೆಣಸಿನಕಾಯಿ, ನಗರಸಭೆ ಮಾಜಿ ಅಧ್ಯಕ್ಷೆ ಉಷಾದಾಸರಸೇರಿದಂತೆಪಕ್ಷದಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



## ಬಿ.ವೈ. ವಿಜಯೇಂದ್ರ ರಾಜ್ಯಾಧ್ಯಕ್ಷ ಸ್ಥಾನ ಬದಲಾವಣೆ ಇಲ್ಲ: ಸಿ.ಸಿ. ಪಾಟೀಲ

**ಸತ್ಯಮಿಥ್ಯ ಸುದ್ದಿಮೂಲ ಗದಗ:** ಬಿಜೆಪಿಯ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆ ಇಲ್ಲ. ಬಿ.ವೈ. ವಿಜಯೇಂದ್ರ ಅವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರನ್ನೇ ರಾಜ್ಯಾಧ್ಯಕ್ಷರಾಗಿಮುಂದುವರಿಸಲಾಗುವುದು ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ನಗರದ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ನಡೆದ ವಿಕಸಿತ ಭಾರತ ಸಂಕಲ್ಪ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಕೆಲ ದಿನಗಳಿಂದ ಬಿಜೆಪಿಯ ರಾಜ್ಯಾಧ್ಯಕ್ಷ ಸ್ಥಾನ ಬದಲಾವಣೆ ಕುರಿತು ಮಾಧ್ಯಮಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಆದರೆ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಂತರ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಸಿ.ಸಿ. ಪಾಟೀಲ, ಎಸ್‌ಐಆರ್ ವಿಚಾರದಿಂದ ಕಾಂಗ್ರೆಸ್ ಪಕ್ಷದವರಿಗೆ ಸೋಲಿನ ಭೀತಿ ಉಂಟಾಗಿದ್ದು, ಅದಕ್ಕಾಗಿ ಈ ವಿಚಾರವನ್ನು ವಿರೋಧಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಪಕ್ಷದ ಮುಖಂಡರು, ಶಾಸಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



## ನೋಟಿಸ್ ಬಂದಾಗ ಉತ್ತರಿಸುತ್ತೇನೆ

**ಬೆಂಗಳೂರು:** ನನಗೆ ಜಾರಿ ನಿರ್ದೇಶನಾಲಯ( ಇಡಿ) ಯಿಂದ ಯಾವುದೇ ನೋಟಿಸ್ ಬಂದಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಬುಧವಾರ ಅವರು ಬೆಂಗಳೂರಿನಲ್ಲಿ ಮಾತನಾಡಿ, ಈ ಕುರಿತಾಗಿ ಸ್ಪಷ್ಟನೆಯನ್ನು ನೀಡಿದರು.



ಇಡಿಯಿಂದಯಾವುದೇನೋಟಿಸ್‌ನನಗೆಬಂದಿಲ್ಲ.ನೋಟಿಸ್‌ಬಂದಾಗಅದಕ್ಕೆ ನಾನು ಉತ್ತರಿಸುತ್ತೇನೆ. ನೋಟಿಸ್ ಬಂದರೆ ನಮಗಿಂತಲೂ ಮಾಧ್ಯಮಗಳಿಗೆ ಮೊದಲು ಗೊತ್ತಾಗುತ್ತೆ ಎಂದರು.

ಕಮಿಷನ್ ದುಡ್ಡಲ್ಲಿ ಹೆಲಿಕಾಪ್ಟರ್ ಬಳಕೆ ಎಂಬ ವರದಿ ವಿಚಾರವಾಗಿ ಅವರು ಪ್ರತಿಕ್ರಿಯೆನೀಡಿ,ಸುಳ್ಳುಸುದ್ದಿಹರಡುತ್ತಿರುವವರವಿರುದ್ಧಮಾನನಷ್ಟಮೊಕದ್ದಮೆ ಹೂಡಲಾಗಿದೆ ಎಂದ ತಿಳಿಸಿದರು. ಕರ್ನಾಟಕದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಮತ್ತು ಅವರ ಆಪ್ತರ ಮೇಲೆ ಸೆಪ್ಟೆಂಬರ್ 2026 ರಲ್ಲಿ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು. ಇಡಿ ದಾಳಿ ನಡೆಸಲು ಅಕ್ರಮ ವಿದೇಶಿ ಹೂಡಿಕೆ, ಪಿಡಬ್ಲ್ಯೂಡಿ ಟೆಂಡರ್ ಅಕ್ರಮಗಳು ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಉಲ್ಲಂಘನೆಯ ಆರೋಪಗಳು ಪ್ರಮುಖ ಕಾರಣಗಳಾಗಿವೆ ಎಂದು ಕೇಳಿಬಂದಿವೆ.

# ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬಿದೆ: ವಿಜಯೇಂದ್ರ

### ಕಾಂಗ್ರೆಸ್ ಪಕ್ಷ ಮುಳುಗುವ ಹಡಗು: ಬಸವರಾಜ ಬೊಮ್ಮಾಯಿ ಆರೋಪ | ಗಜೇಂದ್ರಗಡದಲ್ಲಿ ಸೇವಾ ಸಂಕಲ್ಪ ಅಭಿಯಾನ

**ಗಜೇಂದ್ರಗಡ:** ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ರೈತರು, ಬಡವರು, ಮಹಿಳೆಯರು ಹಾಗೂ ಅಭಿವೃದ್ಧಿ ಕ್ಷೇತ್ರ ಸಂಕಷ್ಟಕ್ಕೆ ಸಿಲುಕಿವೆ. ಸರ್ಕಾರದ ಪಾಪದ ಕೊಡ ತುಂಬಿದ್ದು, ಮುಂಬರುವ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದ ಮಾಜಿ ಸಚಿವ ಕಳಕಪ್ಪ ಜಿ. ಬಂಡಿ ಅವರ ಗೃಹ ಕಚೇರಿಯಲ್ಲಿ ಬುಧವಾರ ಬಿಜೆಪಿ ರೋಣ ಮತಕ್ಷೇತ್ರದ ವತಿಯಿಂದ ಆಯೋಜಿಸಿದ್ದ ಸೇವಾ ಸಂಕಲ್ಪ ಅಭಿಯಾನ ಹಾಗೂ ಬೂತ್ ವಿಜಯ ಸಂಕಲ್ಪ ಯಾತ್ರೆ ಉದ್ಘಾಟಿಸಿ ಅವರು ಮಾತನಾಡಿದರು. ಉತ್ತರ ಕರ್ನಾಟಕದ ಜನರಲ್ಲಿ ಆರ್ಥಿಕ ಬಡತನವಿದ್ದರೂ ಹೃದಯ ಶ್ರೀಮಂತಿಕೆಯಿದೆ. ಬರಗಾಲದಲ್ಲಿಯೂ ಈ ಭಾಗದ ಜನರು ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೆಂಬಲ ನೀಡಿದ್ದಾರೆ ಎಂದರು.

ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ಪ್ರಧಾನಿಯಾಗಿ ಅಭಿವೃದ್ಧಿ ಪರ ಆಡಳಿತದ ಮಾದರಿ ತೋರಿಸಿದ್ದಾರೆ. ಜನಧನ್ ಖಾತೆಗಳ ಮೂಲಕ ಬಡವರಿಗೆ ಬ್ಯಾಂಕಿಂಗ್ ಸೌಲಭ್ಯ, ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಸೇರಿದಂತೆ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ ಎಂದು ವಿಜಯೇಂದ್ರ ಹೇಳಿದರು.

ರಾಜ್ಯದಲ್ಲಿ ಬರಗಾಲ ಸೇರಿದಂತೆ ಹಲವು ಸಮಸ್ಯೆಗಳಿದ್ದರೂ ಸರ್ಕಾರ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ಮುಖ್ಯಮಂತ್ರಿ ಎಸಿ ಕೊಠಡಿಯಲ್ಲಿ ಕುಳಿತು ಆಡಳಿತ ನಡೆಸುತ್ತಿದ್ದಾರೆ. 'ಕುಂಬಕರ್ಣ ಸರ್ಕಾರವನ್ನು ಎಬ್ಬಿಸಲು' ಬಿಜೆಪಿ ಪಾದಯಾತ್ರೆ ಹಾಗೂ ಹೋರಾಟ ನಡೆಸಿದೆ ಎಂದು ಆರೋಪಿಸಿದರು. ಗ್ರಾಮೀಣ ಪ್ರದೇಶಗಳಿಗೆ ಎಂಟು ಗಂಟೆ ವಿದ್ಯುತ್, ರೈತರ ಕೃಷಿ ಸಾಲ ಪರಿಹಾರ ಹಾಗೂ ಟ್ರಾನ್ಸ್‌ಫಾರ್ಮರ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ರೈತರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲದಂತಾಗಿದೆ ಎಂದರು.



ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುದಾನದ ಕೊರತೆ ಉಂಟಾಗಿದೆ. ಕೆಎಸ್‌ಆರ್‌ಟಿಸಿಗೆ ಸಾವಿರಾರು ಕೋಟಿ ರೂಪಾಯಿ ಬಾಕಿಯಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಬಸ್‌ಗಳ ಕೊರತೆಯಿದೆ. ಆರ್ಥಿಕ ಪರಿಸ್ಥಿತಿ ಕುರಿತು ಆರ್ಥಿಕ ಇಲಾಖೆಯೇ ಸರ್ಕಾರಕ್ಕೆ ಪತ್ರ ಬರೆಯುವ ಸ್ಥಿತಿ ನಿರ್ಮಾಣವಾಗಿದೆ ಎಂದು ಟೀಕಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾಗ್ಯಲಕ್ಷ್ಮೀ, 108 ತುರ್ತು ವೈದ್ಯಕೀಯ ಸೇವೆ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು ಎಂದರು.

ಮೀಸಲಾತಿ ಹೆಚ್ಚಳದ ಕೀರ್ತಿ ಬಿಜೆಪಿಗೆ ಸಲ್ಲುತ್ತದೆ ಎಂಬ ಕಾರಣಕ್ಕೆ ಅದರ ವಿರುದ್ಧ ವಾತಾವರಣ ಸೃಷ್ಟಿಸಲಾಗುತ್ತಿದೆ ಎಂದು ಆರೋಪಿಸಿದ ವಿಜಯೇಂದ್ರ, ಜನತೆ ಮುಂದಿನ ಚುನಾವಣೆಯಲ್ಲಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು ಎಂದು ಕರೆ ನೀಡಿದರು. ಪಕ್ಷಕ್ಕಾಗಿ ದುಡಿಯುವ ಕಾರ್ಯಕರ್ತರಿಗೆ ಮುಂದಿನ ಚುನಾವಣೆಯಲ್ಲಿ ಅವಕಾಶ ನೀಡಬೇಕು. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸಿ ಸಂಘಟನೆ ಬಲಪಡಿಸಬೇಕು. ಮೋದಿ ಸರ್ಕಾರದ ಸಾಧನೆಗಳನ್ನು ಮನೆಮನೆಗೆ ತಲುಪಿಸಬೇಕು ಎಂದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಕಾಂಗ್ರೆಸ್ ಸರ್ಕಾರದಿಂದ ಜನತೆ ಆತಂಕಗೊಂಡಿದ್ದು, ಜನತೆಯ ಗಾಳಿ ಬಿಜೆಪಿಯತ್ತ ಬೀಸುತ್ತಿದೆ ಎಂದರು. ಕಾಂಗ್ರೆಸ್ ಪಕ್ಷ ಮುಳುಗುವ ಹಡಗಿನಂತಾಗಿದ್ದು, ಆಂತರಿಕ ಸಂಘರ್ಷದಿಂದ ಬಳಲುತ್ತಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷ ಸುಧಾರಿಸುವುದು ಕಷ್ಟ ಎಂದು ಟೀಕಿಸಿದರು. ಮತದಾರರ ಪಟ್ಟಿಗೆ ಸಂಬಂಧಿಸಿದ ಆರೋಪಗಳ ನೈಜತೆ ಪಟ್ಟಿ ಬಿಡುಗಡೆಯಾದ ಬಳಿಕ ಸ್ಪಷ್ಟವಾಗಲಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದರು. ಮಾಜಿ ಸಚಿವ ಕಳಕಪ್ಪ ಬಂಡಿ ಮಾತನಾಡಿ, ಮೋದಿ ಅವರ ಮೂರನೇ ಅವಧಿಯ ಆಡಳಿತ ದೇಶದಲ್ಲಿ ವಿಶ್ವಾಸ ಮೂಡಿಸಿದ್ದು, ಅವರ ನಾಯಕತ್ವದಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗಿದೆ ಎಂದರು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ರೋಣ ಮಂಡಳ ಅಧ್ಯಕ್ಷ ಉಮೇಶ ಮಲ್ಲಾಪೂರ , ಕುಷ್ಟಗಿ ಕ್ಷೇತ್ರದ ಶಾಸಕರಾದ ದೊಡ್ಡನಗೌಡ ಪಾಟೀಲ ಮಾತನಾಡಿದರು. ಶಿರಹಟ್ಟಿ ಶಾಸಕ ಚಂದ್ರು ಲಮಾಣಿ, ಭಾ ಜ ಪ ಗದಗ ಅಧ್ಯಕ್ಷರಾದ ತೋಟಪ್ಪ(ರಾಜು) ಕುರಡಗಿ, ಮಾಜಿ ಶಾಸಕ ಪ್ರೀತಮಗೌಡ , ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಅನಿಲ ಮೆಣಸಿಕಾಯಿ, ನವೀನ ಗುಳಗನವಣ್ಣವರ, ಅಂದಪ್ಪ ಹಾರೋಗೇರಿ ಅಧ್ಯಕ್ಷರು ಡಂಬಳ ಮಂಡಳ. ಬೋಜರಾಜ ಕ–ರೊದಿ, ನಿಂಗಪ್ಪ ಕೆಂಗಾರ , ಬಿ ಎಮ್ ಸಜ್ಜನರ, ಮುದಿಯಪ್ಪ ಕರಡಿ ಅಮರೇಶ ಬಳಿಗೇರ, ಶರಣಪ್ಪ ಕಂಬಳಿ, ಹೆಚ್ ಕೆ ಹಟ್ಟಿಮನಿ, ಮಹಾಂತೇಶ ಸೋಮನಕಟ್ಟಿ,ಮುದ್ದಿಂಗಪ್ಪ ಕೊರ್ಲಳ್ಳಿ, ಹನಮಪ್ಪ ಹಾದಿಮನಿ, ಇಂದಿರಾ ತೇಲಿ, ಶಂಕರ ಇಟಗಿ,ಹುಲ್ಲಪ್ಪ ಕೆಂಗಾರ, ರಂಗನಾಥ ಮೇಟಿ, ಬೀಮಪ್ಪ ಮಾದರ ಸಲೀಮ ಕಲಾದಗಿ ಮುತ್ತಣ್ಣ ಕಡಗದ, ಆರ್.ಕೆ.ಚವ್ಹಾಣ, ಬಾಸ್ಕರ ರಾಯಬಾಗಿ, ಅಶೋಕ ವನ್ನಾಲ, ರಾಜೇಂದ್ರ ಘೋರ್ಪಡೆ, ಶರಣಪ್ಪ ಕಡಬಲಕಟ್ಟಿ, ದಾನು ರಾಠೋಡ, ಬಸವರಾಜ ಬಂಕದ, ಬುಡ್ಡಪ್ಪ ಮೂಲಿಮನಿ ಸೇರಿದಂತೆ ಅನೇಕರು ಇದ್ದರು.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATYA MITHI
Kannada Daily Morning

# ಮುದ್ದೇಬಿಹಾಳದ ಅಭಿವೃದ್ಧಿಗೆ ಹೊಸ ವೇಗ: ಸ್ಥಳೀಯ ಯೋಜನಾ ಪ್ರದೇಶ 10,405.77 ಹೆಕ್ಟೇರ್‌ಗೆ ವಿಸ್ತರಣೆ

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ಪಟ್ಟಣದ ಬೆಳವಣಿಗೆಗೆ ಹೊಸ ವೇಗ ನೀಡುವ ಮಹತ್ವದ ಬೆಳವಣಿಗೆಯಲ್ಲಿ, ಮುದ್ದೇಬಿಹಾಳ ಸ್ಥಳೀಯ ಯೋಜನಾ ಪ್ರದೇಶವನ್ನು ರಾಜ್ಯ ನಗರಾಭಿವೃದ್ಧಿ ಇಲಾಖೆಯು ಗಣನೀಯವಾಗಿ ವಿಸ್ತರಿಸಿ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಇದರೊಂದಿಗೆ ಮುದ್ದೇಬಿಹಾಳ ಪಟ್ಟಣ ಸೇರಿದಂತೆ ಒಟ್ಟು ಏಳು ಗ್ರಾಮಗಳ ಸಂಪೂರ್ಣ ಕಂದಾಯ ಹಾಗೂ ಗ್ರಾಮಠಾಣಾ ಪ್ರದೇಶಗಳು ಯೋಜನಾ ವ್ಯಾಪ್ತಿಗೆ ಸೇರ್ಪಡೆಯಾಗಿವೆ.

ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯು ಇದೀಗ 10,405.77 ಹೆಕ್ಟೇರ್‌ಗೆ ವಿಸ್ತರಣೆಯಾಗಿದ್ದು, 2011ರ ಜನಗಣತಿ ಆಧಾರದ ಮೇಲೆ ಸುಮಾರು 47,851 ಜನಸಂಖ್ಯೆ ಈ ಯೋಜನಾ ವ್ಯಾಪ್ತಿಯಲ್ಲಿ ಬರಲಿದೆ. ಬಹುವರ್ಷಗಳಿಂದ ಮುದ್ದೇಬಿಹಾಳದ ಜನರ ಪ್ರಮುಖ ಬೇಡಿಕೆಯಾಗಿದ್ದ ಈ ವಿಸ್ತರಣೆಗೆ ಇದೀಗ ಸರ್ಕಾರದ ಅಧಿಕೃತ ಮನ್ನಣೆ ದೊರೆತಿದೆ. ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ ಅವರ ಸತತ ಪ್ರಯತ್ನದಿಂದ ಈ ವಿಸ್ತರಣೆ ಕಾರ್ಯರೂಪಕ್ಕೆ ಬಂದಿದೆ ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಬೆಂಬಲಿಗರು ಹೇಳಿಕೊಂಡಿದ್ದಾರೆ.

ಏಳು ಗ್ರಾಮಗಳು ಯೋಜನಾ ವ್ಯಾಪ್ತಿಯಲ್ಲಿ:
ನೂತನ ಅಧಿಸೂಚನೆಯ ಪ್ರಕಾರ ಯೋಜನಾ ವ್ಯಾಪ್ತಿಗೆ ಸೇರ್ಪಡೆಯಾಗಿರುವ ಪ್ರದೇಶಗಳ ವಿವರ:
ಮುದ್ದೇಬಿಹಾಳ ಪಟ್ಟಣ: 963.00 ಹೆಕ್ಟೇರ್
ಬಿದರಕುಂದಿ: 1,928.71 ಹೆಕ್ಟೇರ್
ಕುಂಟೋಜಿ: 3,614.08 ಹೆಕ್ಟೇರ್
ಕವಡಿಮಟ್ಟಿ: 1,116.17 ಹೆಕ್ಟೇರ್
ಮುದ್ನಾಳ: 970.26 ಹೆಕ್ಟೇರ್
ಹಡಲಗೇರಿ: 927.87 ಹೆಕ್ಟೇರ್
ಶಿರೋಳ: 885.68 ಹೆಕ್ಟೇರ್
ಇವುಗಳಲ್ಲಿ ಕವಡಿಮಟ್ಟಿ, ಮುದ್ನಾಳ ಮತ್ತು ಹಡಲಗೇರಿ ಗ್ರಾಮಗಳು ಹೊಸದಾಗಿ ಯೋಜನಾ ವ್ಯಾಪ್ತಿಗೆ ಸೇರ್ಪಡೆಯಾಗಿವೆ. ಈ ಹಿಂದೆ ಭಾಗಶಃ ವ್ಯಾಪ್ತಿಯಲ್ಲಿದ್ದ ಕೆಲವು ಪ್ರದೇಶಗಳು ಇದೀಗ ಸಂಪೂರ್ಣ ಕಂದಾಯ ಹಾಗೂ ಗ್ರಾಮಠಾಣಾ ಪ್ರದೇಶಗಳೊಂದಿಗೆ ಯೋಜನೆಯೊಳಗೆ ಬಂದಿರುವುದು ಪ್ರಮುಖ ಅಂಶವಾಗಿದೆ.

ಯೋಜಿತ ಅಭಿವೃದ್ಧಿಗೆ ಅವಕಾಶ:
ಸ್ಥಳೀಯ ಯೋಜನಾ ಪ್ರದೇಶ ವಿಸ್ತರಣೆಯಿಂದ ಗ್ರಾಮೀಣ



ಪ್ರದೇಶಗಳಲ್ಲಿನ ಭೂ ಬಳಕೆಗೆ ನಿಯಮಬದ್ಧ ಚೌಕಟ್ಟು ಸಿಗಲಿದೆ. ಮುಂದಿನ ದಿನಗಳಲ್ಲಿ ರಸ್ತೆ, ವಸತಿ ಪ್ರದೇಶ, ಸಾರ್ವಜನಿಕ ಸೌಲಭ್ಯಗಳು, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಯೋಜನಾಬದ್ಧವಾಗಿ ಕೈಗೊಳ್ಳಲು ಇದು ಸಹಕಾರಿಯಾಗುವ ನಿರೀಕ್ಷೆಯಿದೆ. ಭೂ ಅಭಿವೃದ್ಧಿಗೆ ಅವಕಾಶಗಳು ಹೆಚ್ಚಾದಂತೆ ಕೆಲವು ಪ್ರದೇಶಗಳಲ್ಲಿ ಭೂಮಿಯ ಮೌಲ್ಯದಲ್ಲಿಯೂ ಬದಲಾವಣೆ ಕಂಡುಬರುವ ಸಾಧ್ಯತೆಯಿದೆ.

**ಸದ್ಯಕ್ಕೆ ಕೃಷಿ ವಲಯಕ್ಕೆ ಆದ್ಯತೆ:** ವಿಸ್ತರಿಸಲಾದ ಯೋಜನಾ ಪ್ರದೇಶವನ್ನು ಪ್ರಾಥಮಿಕವಾಗಿ ಕೃಷಿ ವಲಯವೆಂದು ಪರಿಗಣಿಸಲಾಗಿದೆ. ಸರ್ಕಾರ ನಿಗದಿಪಡಿಸಿರುವ ವಲಯ ನಿಯಮಾವಳಿಗಳ ಪ್ರಕಾರವೇ ಮುಂದಿನ ಅಭಿವೃದ್ಧಿ ಚಟುವಟಿಕೆಗಳಿಗೆ ಅನುಮತಿ ನೀಡಬೇಕಾಗುತ್ತದೆ. ಹೀಗಾಗಿ ವಸತಿ ಬಡಾವಣೆ, ವಾಣಿಜ್ಯ ಚಟುವಟಿಕೆ, ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳು ಸಂಬಂಧಪಟ್ಟ ಯೋಜನಾ ನಿಯಮಗಳಿಗೆ ಒಳಪಟ್ಟಿರಲಿವೆ.

ಈಗಾಗಲೇ ಭೂ ಪರಿವರ್ತನೆ ಮಾಡಿಕೊಂಡವರಿಗೆ ಅವಕಾಶ:
ಅಧಿಸೂಚನೆ ಹೊರಬರುವ ಮುನ್ನ ಕಂದಾಯ ಇಲಾಖೆಯಿಂದ ನಿಯಮಾನುಸಾರ ಭೂ ಪರಿವರ್ತನೆ ಮಾಡಿಕೊಂಡಿರುವ ಭೂಮಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದಿರುವ ವಿನ್ಯಾಸಗಳಿಗೆ ನಿಯಮಾನುಸಾರ ಕಟ್ಟಡ ನಿರ್ಮಾಣದ ಪ್ರಾರಂಭಿಕ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ಗ್ರಾಮಠಾಣಾ ಪ್ರದೇಶಕ್ಕೆ ಹೊಂದಿಕೊಂಡಿರುವ 250 ಮೀಟರ್ ವ್ಯಾಪ್ತಿಯಲ್ಲಿನ ಸ್ವಾಭಾವಿಕವಾಗಿ ಬೆಳೆಯುತ್ತಿರುವ ಪ್ರದೇಶಗಳಿಗೆ ಚಾಲ್ತಿಯಲ್ಲಿರುವ ವಲಯ ನಿಯಮಾವಳಿಗಳನ್ವಯ ಅನುಮೋದನೆ ನೀಡಲು ಅವಕಾಶವಿದೆ.

### ಮುದ್ದೇಬಿಹಾಳದ ಭವಿಷ್ಯಕ್ಕೆ ಮಹತ್ವದ ಬೆಳವಣಿಗೆ

ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿ ವಿಸ್ತರಣೆಯಿಂದ ಮುದ್ದೇಬಿಹಾಳ ಪಟ್ಟಣದ ಬೆಳವಣಿಗೆ ಪಟ್ಟಣದ ಗಡಿಗೆ ಮಾತ್ರ ಸೀಮಿತವಾಗದೆ ಸುತ್ತಮುತ್ತಲಿನ ಗ್ರಾಮಗಳನ್ನೂ ಒಳಗೊಂಡ ಸಮಗ್ರ ನಗರ-ಗ್ರಾಮ ಅಭಿವೃದ್ಧಿಯತ್ತ ಸಾಗಲು ಅವಕಾಶ ಸಿಕ್ಕಂತಾಗಿದೆ. ಮುಂದಿನ ಹಂತದಲ್ಲಿ ರೂಪುಗೊಳ್ಳಲಿರುವ ಮಹಾಯೋಜನೆಯತ್ತ ಮುದ್ದೇಬಿಹಾಳದ ಜನರ ಗಮನ ನೆಟ್ಟಿದೆ.

### ಮೇಲ್ದರ್ಜೆಗೇರಿರುವುದರಿಂದ ಹೆಚ್ಚಿನ ಅಭಿವೃದ್ಧಿಗೆ ಅವಕಾಶ

"ಪುರಸಭೆಯಿಂದ ನಗರಸಭೆಗೆ ಮೇಲ್ದರ್ಜೆಗೆ ಏರಿಸಿರುವುದರಿಂದ ಇನ್ನೂ ಹೆಚ್ಚಿನ ಅನುದಾನ ಬರುವ ನಿರೀಕ್ಷೆಯಿದೆ. ಇದರಿಂದ ನಗರ ಪ್ರದೇಶಕ್ಕೆ ಸೇರ್ಪಡೆಯಾಗಿರುವ ನೂತನ ಗ್ರಾಮೀಣ ಪ್ರದೇಶಗಳೂ ಅಭಿವೃದ್ಧಿಯಾಗಲಿವೆ. ಶಾಸಕರಾದ ನಾಡಗೌಡರ ಸತತ ಪ್ರಯತ್ನದಿಂದ ನಗರಸಭೆಯಾಗಿ ಪರಿವರ್ತನೆಗೊಂಡಿದೆ. ವಿರೋಧಿಗಳ ಟೀಕೆಗಳಿಗೆ ಕಿವಿಗೊಡದೆ ಅಭಿವೃದ್ಧಿಗೆ ಗಮನಹರಿಸಿರುವ ಶಾಸಕರಿಗೆ ನಗರದ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ."

। ಅಕ್ಷತಾ ಶರಣಬಸು ಚಲವಾದಿ, ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ತಾಲೂಕಾಧ್ಯಕ್ಷೆ

**ಎರಡು ವರ್ಷದಲ್ಲಿ ಮಹಾಯೋಜನೆ ಸಿದ್ಧಪಡಿಸಲು ಸೂಚನೆ:** ಸ್ಥಳೀಯ ಯೋಜನಾ ಪ್ರದೇಶ ವಿಸ್ತರಣೆಯಾದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ಸಮಗ್ರ ಮಹಾಯೋಜನೆ (ಮಾಸ್ಟರ್ ಪ್ಲಾನ್) ಸಿದ್ಧಪಡಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ. ಮಹಾಯೋಜನೆ ಸಿದ್ಧವಾದ ಬಳಿಕ ಯಾವ ಪ್ರದೇಶದಲ್ಲಿ ವಸತಿ, ವಾಣಿಜ್ಯ, ಕೈಗಾರಿಕೆ, ಕೃಷಿ ಅಥವಾ ಸಾರ್ವಜನಿಕ ಉಪಯೋಗದ ಚಟುವಟಿಕೆಗಳಿಗೆ ಅವಕಾಶ ನೀಡಬೇಕು ಎಂಬುದಕ್ಕೆ ಸ್ಪಷ್ಟ ಮಾರ್ಗಸೂಚಿ ರೂಪುಗೊಳ್ಳಲಿದೆ.

# ಎಸ್‌ಐಆರ್ ಮೂಲಕ ಮತದಾನದ ಹಕ್ಕು ಕಸಿಯುವ ಯತ್ನ: ಲಮಾಣಿ

## ಮತದಾರರ ಹಕ್ಕು ರಕ್ಷಣೆಗೆ ಕಾರ್ಯಕರ್ತರು ಜಾಗೃತರಾಗಬೇಕು । ಸಚಿವ ರುದ್ರಪ್ಪ ಕರೆ

**ಹಾವೇರಿ:** ಎಸ್‌ಐಆರ್ ಪ್ರಕ್ರಿಯೆ ಮೂಲಕ ಮತದಾರರ ಹಕ್ಕು ಕಸಿಯುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಜಿಲ್ಲಾ ಘಟಕದ ವತಿಯಿಂದ ಬುಧವಾರ ನಗರದ ಮೈಲಾರ ಮಹದೇವಪ್ಪ ವೃತ್ತದಲ್ಲಿ ಪ್ರಜಾಪ್ರಭುತ್ವ ಉಳಿಸಿ ಎಂದು ಪ್ರತಿಭಟನೆ ನಡೆಸಲಾಯಿತು.

ನಗರದ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಕಾಂಗ್ರೆಸ್ ಮುಖಂಡರು ನೇರವಾಗಿ ಮೈಲಾರ ಮಹದೇವಪ್ಪ ವೃತ್ತಕ್ಕೆ ಆಗಮಿಸಿ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಮಾತನಾಡಿ, ಮೋದಿ ಅಥವಾ ಜ್ಞಾನೇಶಕುಮಾರ ಬಂದರೂ ನಮ್ಮ ಹಕ್ಕನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ. ಮತದಾರರ ಪಟ್ಟಿಯಲ್ಲಿ ಯಾರೊಬ್ಬರ ಹೆಸರೂ ತಪ್ಪದಂತೆ ನೋಡಿಕೊಳ್ಳುವುದು ಬೂತ್ ಮಟ್ಟದ ಏಜೆಂಟ್‌ಗಳ (ಬಿಎಲ್‌ಎ) ಜವಾಬ್ದಾರಿಯಾಗಿದೆ. ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಪರಿಶೀಲಿಸಿ ಸೇರ್ಪಡೆಗೊಳಿಸುವಂತೆ ಕಾರ್ಯಕರ್ತರಿಗೆ ಸೂಚಿಸಿದರು.

ಬಿಜೆಪಿ ಕುತಂತ್ರದ ಮೂಲಕ ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿಯೂ ಇದೇ ರೀತಿಯ ಬೆಳವಣಿಗೆ ನಡೆದಿದೆ ಎಂದು ಆರೋಪಿಸಿದ ಅವರು, ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸುವ ಮೂಲಕ ಹೋರಾಟ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಬಗ್ಗಬಾರದು ಎಂದು ಕರೆ ನೀಡಿದರು.

ಪಕ್ಷದ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಬಿಜೆಪಿಯಿಂದ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿದೆ. ನಮ್ಮ ಮತವನ್ನು ಕಿತ್ತುಕೊಳ್ಳಲು ನಿಮಗೆ ಯಾವ ಹಕ್ಕಿದೆ? ಚುನಾವಣಾ ಆಯುಕ್ತರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಬಿಜೆಪಿಯವರು ದಲಿತರು, ಅಲ್ಪಸಂಖ್ಯಾತರು ಹಾಗೂ ಅಲೆಮಾರಿ ಸಮುದಾಯಗಳ ಮತಗಳನ್ನು ಪಟ್ಟಿಯಿಂದ ತೆಗೆದುಹಾಕಿರುವುದನ್ನು ಸಮರ್ಥಿಸುತ್ತಿದ್ದಾರೆ ಎಂದು ಆರೋಪಿಸಿದ ಅವರು, ದಕ್ಷಿಣ ಭಾರತ ಬಿಜೆಪಿಗೆ ಕಗ್ಗಂಟಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ಜತೆಗೂಡಿ ಈ ಒಳಸಂಚು ನಡೆಸಲಾಗುತ್ತಿದೆ ಎಂದು ದೂರಿದರು. ಇದಕ್ಕೆ ಕಾರಣರಾದ ಕೇಂದ್ರ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ್ ಖಾದ್ರಿ ಮಾತನಾಡಿ, ಬಿಜೆಪಿಯಿಂದ ಮತ ಕಳುವು ಮಾಡುವ ಪ್ರಯತ್ನ ನಡೆಯುತ್ತಿದೆ. ಆದರೆ, ಅವರ ಸಂಚು ಫಲಿಸುವುದಿಲ್ಲ. ಎಸ್‌ಐಆರ್ ಮೂಲಕ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. 2029ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್‌ನ್ನು ಅಧಿಕಾರಕ್ಕೆ ತಂದು ಪಾಠ ಕಲಿಸಬೇಕು. ನಮ್ಮ ಹಕ್ಕುಗಳನ್ನು ರಕ್ಷಿಸಲು ಸಂವಿಧಾನಬದ್ಧವಾಗಿ ಪ್ರತಿಭಟನೆ ನಡೆಸಿದರೂ ರಾಹುಲ್ ಗಾಂಧಿ ಅವರ ವಿರುದ್ಧ ಪ್ರಕರಣ ದಾಖಲಿಸಿ ಹೋರಾಟ ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಇದಕ್ಕೆಲ್ಲ ಕಾಂಗ್ರೆಸ್ ಕಾರ್ಯಕರ್ತರು ಬಗ್ಗುವುದಿಲ್ಲ ಎಂದು ಎಚ್ಚರಿಸಿದರು.

ಪ್ರಮುಖರಾದ ಎಂ.ಎಂ. ಹಿರೇಮಠ, ಸಂಜಯ ಡಾಂಗೆ, ಎಸ್‌ಎಫ್‌ಎನ್ ಗಾಜಿಗೌಡ್ರ, ಬಸವರಾಜ ಹೆಡಿಗೊಂಡ, ಕೊಟ್ರೇಶಪ್ಪ ಬಸೇಗಣ್ಣಿ, ಸಂಜೀವಗಾಂಧಿ ಸಂಜೀವಣ್ಣನವರ, ಮಲ್ಲಿಕಾರ್ಜುನ ಬೂದಗಟ್ಟಿ, ಅಂದಾನಿಗೌಡ್ರಗುಡ್ಡನಗೌಡ,ವಸಂತಾಬಾಗೂರ,ಸಿ.ಎಸ್.ಲಕ್ಷ್ಮೇಶ್ವರಮಠ ಸೇರಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

### 1.15 ಲಕ್ಷ ಮತದಾರರ ಹೆಸರು ಡಿಲೀಟ್

ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಹೆಸರಿನಲ್ಲಿ ಸುಮಾರು 1.15 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಅರ್ಹ ಮತದಾರರ ಮತದಾನದ ಹಕ್ಕನ್ನು ರಕ್ಷಿಸುವುದು ಕಾಂಗ್ರೆಸ್‌ನ ಹೋರಾಟವಾಗಿದೆ. ದೇಶದಲ್ಲಿ ಜನಿಸಿದ ಅರ್ಹ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ದೊರೆಯಬೇಕು. ದೇಶಾದ್ಯಂತ ಕೋಟ್ಯಂತರ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಆರೋಪಿಸಿದ ಅವರು, ಇವರೆಲ್ಲರೂ ಬಾಂಗ್ಲಾದೇಶದಿಂದ ಬಂದವರೇ? ಅರ್ಹ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಸರಿಯೇ? ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀಲರಗಿ ಪ್ರಶ್ನಿಸಿದರು.




# ಪ್ರಧಾನಿ ಮೋದಿ ಜೀ ಮಾತಿಗೆ ವಿಶ್ವಮನ್ನಣೆ: ಪ್ರೊ.ಮಾ.ನಾಗರಾಜ

**ಸಮಾಲೋಚನೆ ಸುದ್ದಿ ಹಾವೇರಿ**
ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಳೆದ 25 ವರ್ಷಗಳಿಂದ ಈ ದೇಶದ ಜನರ ಏಳ್ಗೆಗಾಗಿ ಹಗಲು- ಇರುಳು ಶ್ರಮಿಸುತ್ತಿದ್ದಾರೆ .

ಈ25ವರ್ಷಗಳಅವರಪ್ರಯಾಣದಲ್ಲಿಗುಜರಾತ್‌ಮಾಡೆಲ್‌ಅನ್ನುದೇಶಕ್ಕೆ ಪರಿಚಯಿಸಿದರು. ಇದೀಗ ಮೂರನೇ ಅವಧಿಗೆ ಪ್ರಧಾನಮಂತ್ರಿಯಾಗಿ ಭಾರತದ ಮಾಡೆಲ್ ಅನ್ನು ಇಡೀ ಪ್ರಪಂಚಕ್ಕೆ ಪರಿಚಯಿಸಿ ಕೊಟ್ಟಿದ್ದಾರೆ ಎಂದು ರಾಜ್ಯಸಭಾ ಸದಸ್ಯರು, ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಕೇರಳಮ್ ರಾಜ್ಯದ ಪ್ರಭಾರಿಗಳಾದ ಪ್ರೊ.ಮಾ.ನಾಗರಾಜ ಹೇಳಿದರು.

ಹಾವೇರಿ ನಗರದ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಾರ್ಟಿ ಹಾವೇರಿ ಜಿಲ್ಲೆಯ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರ ಸುಧೀರ್ಘ 25 ವರ್ಷಗಳು ಜನಸೇವೆಯಿಂದ ದೇಶ ಸೇವೆ ಎಂಬ ಧ್ಯೆಯದೊಂದಿಗೆ ವಿಕಸಿತ ಭಾರತ ಸಂಕಲ್ಪ ಸಭೆ ಹಾಗೂ ಸೇವಾ ಜ್ಯೋತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತಮ್ಮ ಚಾಣಾಕ್ಷ ನಡೆ, ನುಡಿಯ ಮೂಲಕ ಇಡೀ ವಿಶ್ವದ ಪ್ರಭಾವಿ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ಭಾರತದ ಪ್ರಧಾನಿಯ ಒಂದೊಂದು ಮಾತಿಗೂ ವಿಶ್ವಮನ್ನಣೆ ಸಿಗುವಂತೆ ಮಾಡಿದ್ದಾರೆ. ಭಾರತವನ್ನು ವಿಶ್ವಗುರುವನ್ನಾಗಿ ಮಾಡುವ ಸಂಕಲ್ಪ ಮಾಡಿದ್ದಾರೆ. ಮೋದಿ ಜಿ ಕಂಡಿರುವ ವಿಕಸಿತ ಭಾರತ 2047 ಕನಸು ನನಸು ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಕೈ ಜೋಡಿಸೋಣ ಎಂದು ಕರೆ ನೀಡಿದರು.

ಈ ಸಂಧರ್ಭದಲ್ಲಿ ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಭಾರತೀಯ ಜನತಾ ಪಾರ್ಟಿಯ ಹಾವೇರಿ ಜಿಲ್ಲಾಧ್ಯಕ್ಷರಾದ ವೀರುಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕರಾದ ಶಿವರಾಜ ಸಜ್ಜನ, ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ಡಾ.ಬಸವರಾಜ ಕೇಲಗಾರ, ಸಿದ್ದರಾಜ ಕಲಕೋಟಿ, ಡಾ.ಶೋಭಾ ನಿಸ್ಸಿಮಗೌಡ್ರ ಸೇರಿದಂತೆ ಹಾವೇರಿ ಜಿಲ್ಲೆಯ ಎಲ್ಲ ಮಂಡಳಗಳ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.




# ಮೂರು ಫಾರ್ಮಾ ಕಂಪನಿಗಳು ಅಕ್ರಮದಲ್ಲಿ ಶಾಮೀಲು

**ಬೆಂಗಳೂರು:** ನಕಲಿ ಔಷಧ ತಯಾರಿ ಹಾಗೂ ಮಾರಾಟ ಜಾಲದ ತನಿಖೆಯನ್ನು ವಿಶೇಷ ತನಿಖಾ ತಂಡವು (ಎಸ್‌ಐಟಿ) ಚುರುಕುಗೊಳಿಸಿರುವ ಬೆನ್ನಲ್ಲೆ, ನಗರಾದ್ಯಂತ ಇನ್ನೂ ಮೂರು ಫಾರ್ಮಾ ಕಂಪನಿಗಳು ಅಕ್ರಮದಲ್ಲಿ ಶಾಮೀಲಾಗಿದ್ದ ಸ್ಫೋಟಕ ಸಂಗತಿ ಬಯಲಾಗಿದೆ.

ಕರ್ನಾಟಕದಲ್ಲಿ ಭೀಕರ ರಕ್ತಪಾತಕ್ಕೆ ಸಂಚು, ಮೂವರು ಬಿಜೆಪಿ ನಾಯಕರ ಹತ್ಯೆಗೆ ಸ್ಕೆಚ್, ಶಂಕಿತ ಉಗ್ರರು ಅರೆಸ್ಟ್

ಈ ಬೆನ್ನಲ್ಲೇ ರೋಗಿಗಳ ಜೀವಕ್ಕೆ ಕುತ್ತು ತರುವ ಔಷಧಿಪೂರೈಸಿದ್ದ ಚಾಮರಾಜಪೇಟೆ ಮೆಡಿ 365, ಗುಬ್ಬಲಾಳದ ಪಟೇಲ್ ಮೆಡಿಟ್ರೇಡ್, ರಾಜರಾಜೇಶ್ವರಿನಗರದ ಆರ್.ಆರ್. ಫಾರ್ಮಾಗಳ ಮೇಲೆ ಎಸ್‌ಐಟಿ ದಾಳಿ ನಡೆಸಿದೆ. ಈ ಹಿಂದೆ ಕೃಪಾ ಫಾರ್ಮಾ ಮೇಲೆ ದಾಳಿ ನಡೆಸಿ ಅದರ ಮಾಲೀಕ ವಿ. ರೇಶ್‌ಕುಮಾರ್ ಜೈನ್‌ನನ್ನು ಬಂಧಿಸಲಾಗಿತ್ತು.

ಮೂರು ಔಷಧ ಸರಬರಾಜು ಕಂಪನಿಗಳ ಮೇಲೆ ದಾಳಿ ನಡೆಸಿರುವ ಪ್ರತ್ಯೇಕ ತಂಡಗಳು ನಕಲಿ ಔಷಧ ಪೂರೈಕೆಗೆ ಸಂಬಂಧಿಸಿದ ಮಹತ್ವದ ದಾಖಲೆ ಜಪ್ತಿ ಮಾಡಿದೆ. ಮೂರೂ ಕಂಪನಿಗಳು ನಕಲಿ ಔಷಧ ಜಾಲದ ಆಧಾರ ಕಂಪನಿ ಡಿಎಂ ಫಾರ್ಮಾದಿಂದ ಔಷಧ ಖರೀದಿ ಕುರಿತ ಲೆಕ್ಕಪತ್ರಗಳು ಸಿಕ್ಕಿವೆ ಎಂದು ತನಿಖಾ ಮೂಲಗಳು ತಿಳಿಸಿವೆ.

**ನೋಟಿಸ್ ಜಾರಿ?:** ತಾವರೆಕೆರೆ ಸಮೀಪದ ಸಿ.ಕೆ. ತಾಂಡಾದ ರಂಜಿತ್ ರಾಹುಲ್ ಫಾರ್ಮ್ ಹೌಸ್ ನಲ್ಲಿ ಕಿಂಗ್‌ಪಿನ್ ಆರ್. ಪ್ರಶಾಂತ್ ಮತ್ತವನ ತಂಡವು ಒಂದು ವರ್ಷದಿಂದ ತಯಾರಿಸುತ್ತಿದ್ದ ನಕಲಿ ಔಷಧವು ಕೃಪಾಫಾರ್ಮಾ, ಮೆಡಿ365, ಪಟೇಲ್ ಮೆಡಿಟ್ರೇಡ್, ಆರ್.ಆರ್. ಫಾರ್ಮಾಗಳಿಗೆ ನಿಗದಿತವಾಗಿ ಸರಬರಾಜಾಗುತ್ತಿತ್ತು.

ಚೆನ್ನೈನ ಬಾಲಸುಬ್ರಮಣಿ ಹಾಗೂ ಪ್ರಶಾಂತ್‌ನ ಪತ್ನಿ ಹೆಸರಿನಲ್ಲಿರುವ 'ಡಿಎಂ' ಫಾರ್ಮಾದಿಂದಲೇ ನಕಲಿ ಔಷಧಗಳನ್ನು ಖರೀದಿಸಿ ನಗರಾದ್ಯಂತ ಪ್ರತಿಷ್ಠಿತ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಈ ಮೂಲಕ ನಕಲಿ ಔಷಧ ಪೂರೈಕೆಗೆ ಈ ಕಂಪನಿಗಳು ಸಹಕಾರ ನೀಡಿವೆ. ಅಕ್ರಮದಲ್ಲಿ ಭಾಗಿಯಾಗಿರುವ ಮೂರು ಕಂಪನಿಗಳ ಮಾಲೀಕರು ಹಾಗೂ ಪ್ರತಿನಿಧಿಗಳಿಗೆ ಶೀಘ್ರವೇ ನೋಟಿಸ್ ಜಾರಿಗೊಳಿಸಿ ವಿಚಾರಣೆಗೆ ಕರೆಯಲಾಗುವುದು. ವಿಚಾರಣೆಗೆ ಸಹಕರಿಸದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತನಿಖಾ ಮೂಲಗಳು ಹೇಳಿವೆ.

# ಸೌಲಭ್ಯ ನೀಡಲು ಹಿಂದೇಟು: ಸಚಿವರ ಮನೆ ಎದುರು ಪ್ರತಿಭಟನೆಗೆ ಕಾರ್ಮಿಕರ ಸಿದ್ಧತೆ

## ಹಾವೇರಿ ಜಿಲ್ಲೆಯಲ್ಲಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದನೆ ಇಲ್ಲ; ಶಾಸಕರ ಮಾತಿಗೂ ಬೆಲೆ ಇಲ್ಲವೆ..!

**ರಾಣೇಬೆನ್ನೂರು:** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಹಾವೇರಿ ಜಿಲ್ಲೆಯ ಕಾರ್ಮಿಕ ಇಲಾಖೆ ಅಧಿಕಾರಿಗಳು ವಿಳಂಬ ಹಾಗೂ ನಿಜವಾದ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿ ರಾಣೇಬೆನ್ನೂರು ತಾಲ್ಲೂಕು ಕಾರ್ಮಿಕ ಸಂಘದ ಮುಖಂಡ ಅಸ್ಲಾಂ ಫಣಿಬಂದ್ ಆಕ್ರೋಶ ವ್ಯಕ್ತಪಡಿಸಿದರು

ನಗರದ ಕಾರ್ಮಿಕರ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಣೆಬೆನ್ನೂರ ತಾಲೂಕಿನ ಕಾರ್ಮಿಕರ ಸಮಸ್ಯೆಗಳನ್ನು ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಸೂಕ್ತ ಸ್ಪಂದನೆ ದೊರೆಯುತ್ತಿಲ್ಲ. ಕ್ಷೇತ್ರದ ಶಾಸಕರ ಮೂಲಕವೂ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದ್ದರೂ ಅರ್ಹ ಕಾರ್ಮಿಕರಿಗೆ ಮದುವೆ ಸಹಾಯಧನ, ಪಿಂಚಣಿ, ಅಪಘಾತ ವಿಮೆ ಸೇರಿದಂತೆ ಇತರೆ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ.

ವಿವಾಹ ಧನಸಹಾಯ ಸೇರಿದಂತೆ ವಿವಿಧ ಸೌಲಭ್ಯಗಳಿಗಾಗಿ ಸಲ್ಲಿಸಿರುವ 200ಕ್ಕೂ ಹೆಚ್ಚು ಅರ್ಜಿಗಳು ಕಳೆದ ಮೂರು ವರ್ಷಗಳಿಂದ ಬಾಕಿ ಉಳಿದಿವೆ. ನಿಯಮಾನುಸಾರ ದಾಖಲೆಗಳನ್ನು ಸಲ್ಲಿಸಿ ಅರ್ಜಿ ನೀಡಿರುವ ಕಾರ್ಮಿಕರು ಹಲವು ಬಾರಿ ಕಚೇರಿಗೆ ಅಲೆದಾಡುವಂತಾಗಿದೆ. ಪರಿಶೀಲನೆ ಹೆಸರಿನಲ್ಲಿ ಮೂರು–ನಾಲ್ಕು ಬಾರಿ ವೆರಿಫಿಕೇಶನ್ ನಡೆಸಿದರೂ ಅರ್ಜಿಗಳ ವಿಲೇವಾರಿ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇತ್ತಿಚೆಗೆ ಪರಿಶೀಲನಾ ಪ್ರಕ್ರಿಯೆಯಲ್ಲಿ ಹಲವು ವರ್ಷಗಳಿಂದ ಚಾಲ್ತಿಯಲ್ಲಿದ್ದ ನೈಜ ಕಾರ್ಮಿಕರ ಕಾರ್ಡ್‌ಗಳನ್ನೇ ರದ್ದುಪಡಿಸಲಾಗಿದೆ. ಅರ್ಹ ಕಾರ್ಮಿಕರ ಕಾರ್ಡ್‌ಗಳನ್ನು ಮರುಸ್ಥಾಪಿಸಿ, ಅವರಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಸಮಸ್ಯೆ ಬಗೆಹರಿಯದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿರುವುದಾಗಿ ತಿಳಿಸಿದರು. ಸುದ್ದಿಗೋಷ್ಠಿ ಸಮಯದಲ್ಲಿ ಕಾರ್ಮಿಕ ಮುಖಂಡರಾದ ಅಹ್ಮದ್ ಖಾನ ಐರಣಿ, ನಾರಾಯಣ ಅಂತರವಳ್ಳಿ, ರಾಜಪ್ಪ ಬಾರ್ಕಿ, ಸುನೀಲ ಬೆಟಗೇರಿ, ವಿಶ್ವನಾಥ ಕಮ್ಮಾರ, ಮಾಲತೇಶ ಜೋಗಿ ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆ ಮುಖಂಡರು, ಕಾರ್ಮಿಕರು ಹಾಜರಿದ್ದರು.



### ಶಾಸಕರ ಮಾತಿಗೂ ಬೆಲೆ ಇಲ್ಲವೇ?

ಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಶಾಸಕರಾದ ಪ್ರಕಾಶ ಕೋಳಿವಾಡ ಅವರ ಮೂಲಕ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ, ಅದರಂತೆ ಅರ್ಜಿಗಳ ವಿಲೇವಾರಿ ಹಾಗೂ ಸೌಲಭ್ಯ ವಿತರಣೆ ಮಾಡುವಲ್ಲಿ ಹಿಂದೇಟು ಹಾಕಿದ್ದಾರೆ. ಕ್ಷೇತ್ರದ ಶಾಸಕರ ಕರೆ ಮಾಡಿ ಹೇಳಿದರು ಅವರ ಮಾತಿಗೂ ಅಧಿಕಾರಿಗಳು ಬೆಲೆ ನೀಡುತ್ತಿಲ್ಲ. ಬಡ ಕಾರ್ಮಿಕರು ಮಾತ್ರ ಕಚೇರಿಯಿಂದ ಕಚೇರಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಾರ್ಮಿಕ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಸಚಿವ ಸಂತೋಷ ಲಾಡ್ ಮನೆ ಎದುರು ಪ್ರತಿಭಟನೆಗೆ ಸಿದ್ಧತೆ..

ಹಾವೇರಿ ಜಿಲ್ಲೆಯ ಕಾರ್ಮಿಕರ ಸಮಸ್ಯೆಗಳಿಗೆ ತಕ್ಷಣ ಪರಿಹಾರ ದೊರೆಯದಿದ್ದರೆ ಕಾರ್ಮಿಕರ ಹಿತಕ್ಕಾಗಿ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರ ಮನೆ ಎದುರು ಪ್ರತಿಭಟನೆ ನಡೆಸಲು ಮುಂದಾಗುತ್ತೇವೆ ಎಂದು ಕಾರ್ಮಿಕ ಸಂಘದ ಮುಖಂಡರು ಎಚ್ಚರಿಕೆ ನೀಡಿದ್ದಾರೆ. ಹಿರೇಕೆ–ರೂರು ಕ್ಷೇತ್ರದಲ್ಲಿ ಬಾಕಿ ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಂಡಿರುವ ಮಾದರಿಯಲ್ಲಿ ರಾಣೇಬೆನ್ನೂರು ಕ್ಷೇತ್ರದ ಕಾರ್ಮಿಕರಿಗೂ ನ್ಯಾಯ ಒದಗಿಸಬೇಕು. ಸರ್ಕಾರದ ಕಲ್ಯಾಣ ಯೋಜನೆಗಳು ಅರ್ಹ ಬಡ ಕಾರ್ಮಿಕರಿಗೆ ತಲುಪುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಕಾರ್ಮಿಕ ಮುಖಂಡರು ಆಗ್ರಹಿಸಿದ್ದಾರೆ.

## ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಅರ್ಜಿ

ಹಾವೇರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ಮಾಧ್ಯಮ ಸಂಸ್ಥೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ "ಪೂರ್ಣಾವಧಿ/ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ / ಸ್ಥಾನಿಕ ಸಂಪಾದಕರ / ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ "ಸೇವಾ ಸಿಂಧು" ಪೋರ್ಟಲ್ https://sevasindhu.karnataka.gov.in ಮೂಲಕ ಸಮೀಪದ ಗ್ರಾಮ–1 ಕೇಂದ್ರದಲ್ಲಿ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಈ ಹಿಂದೆ ಇದ್ದ ಮಾರ್ಗಸೂಚಿಯಲ್ಲಿ 11 ತಿಂಗಳ ವೇತನ ಪತ್ರ ಸಲ್ಲಿಸಬೇಕು ಎಂಬ ಷರತ್ತನ್ನು ಸಡಿಲಿಸಿ. ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ/ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಆನ್ ಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ. ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಸುದ್ದಿ ಸಂಗ್ರಹಿಸಲು ಅನುಕೂಲ ಕಲ್ಪಿಸಲು ಸರ್ಕಾರವು ವಾರ್ತಾ ಇಲಾಖೆಯ ಮೂಲಕ ಉಚಿತ ಬಸ್ ಪಾಸ್ ಗಳನ್ನು ನೀಡುತ್ತಿದೆ.

ರಾಜ್ಯದ ಎಲ್ಲಾ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ ಗ್ರಾಮ–1 ಕೇಂದ್ರದ ಮೂಲಕ 2026 ರ ಅಕ್ಟೋಬರ್ 31 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಂ.ಎನ್.ಅನುಚೇತ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ನಾಳೆ

ಹಾವೇರಿ: ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಸೆ. 09 ಶುಕ್ರವಾರ "110 ಕೆವಿ ಹಾವೇರಿ, 110 ಕೆವಿ.ಕುಳೇನೂರು, 110 ಕೆವಿ ಬಸವನಕಟ್ಟಿ, 110 ಕೆವಿ ಗುತ್ತಲ, 33 ಕೆ.ವಿ ಹೊಸರಿತ್ತಿ , 33 ಕೆವಿ ನೀರಲಗಿ, 33 ಕೆವಿ ಕೇರಿಮತ್ತಿಹಳ್ಳಿ ಹಾಗೂ 33 ಕೆವಿ ಗಾಂಧೀಪುರ ಮತ್ತು 33 ಕೆ.ವಿ ಆಡೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಗೆ ಬರುವ ಸಂಪೂರ್ಣ ಹಾವೇರಿ ನಗರ, ಈ ಫೀಡರ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳು ಮತ್ತು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವದು. ಆದ್ದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಷ್ಟ್ರಮಟ್ಟದ ಇನ್‌ಸ್ಪೈರ್ ಸ್ಪರ್ಧೆಗೆ ವಿದ್ಯಾರ್ಥಿಗಳು ಆಯ್ಕೆ

ಹಾವೇರಿ: ನವದೆಹಲಿಯ ಪ್ರಗತಿ ಮೈದಾನದಲ್ಲಿ ಅ.12 ರಿಂದ 14ರವರೆಗೆ ನಡೆಯುವ ಪ್ರಸಕ್ತ 2026–27ನೇ ಸಾಲಿನ ರಾಷ್ಟ್ರಮಟ್ಟದ national level Competition and Exhibition (INSPIRE-12) ಸ್ಪರ್ಧೆ ಹಾಗೂ ವಸ್ತು ಪ್ರದರ್ಶನಕ್ಕೆ ಜಿಲ್ಲೆಯ 9 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆಗಳನ್ನು ಮೂಡಿಸುವಂತಹ ವಿಜ್ಞಾನದ ಆವಿಷ್ಕಾರವುಳ್ಳ ಹೊಸ ಅನ್ವೇಷಣಾ ಪ್ರಯೋಗಗಳು ಮುನ್ನಡೆ ಬರುತ್ತಿದ್ದು, ಅದರಲ್ಲಿ ಇನ್‌ಪೈರ್ ಅವಾರ್ಡ್ ಒಂದಾಗಿದೆ.

ವಿದ್ಯಾರ್ಥಿಗಳ ವಿವರ: ಬ್ಯಾಡಗಿ ತಾಲೂಕಿನ ಕಾಗಿನೆಲೆಯ ಶ್ರೀ ಕನಕ ಗುರುಪೀಠ ಹೆಚ್.ಪಿ.ಎಸ್‌ನ ಹರೀಶ ಶಾನಬೋಗರ, ಹಿರೇಕೆರೂರು ತಾಲೂಕಿನ ಬಾಳಂಬೀಡದ ಕೌರವ ಶಿಕ್ಷಣ ಸಂಸ್ಥೆಯ ಕವನಾ ಎಂ. ಪಾಟೀಲ, ರಾಣೇಬೆನ್ನೂರು ತಾಲೂಕಿನ ಕವಲೇತ್ತಿನ ಗ್ರಾಸಿಂ ಸಿರಿಗನ್ನಡ ವಿದ್ಯಾಲಯದ ವೈಭವ ಎಲ್.ಕೆ., ಹಿರೇಮಾಗನೂರು ಹೆಚ್.ಪಿ.ಎಸ್‌ನ ಸಂಧ್ಯಾ ಎನ್. ಕಳ್ಳಿಮನಿ, ಜಕ್ಕನಾಯಿಕನಕೊಪ್ಪ ಹೆಚ್.ಪಿ.ಎಸ್‌ನ ಪವಿತ್ರಾ, ಹಿರೇಕೆರೂರು ತಾಲೂಕಿನ ಕಚವಿ ಜಿ.ಹೆಚ್.ಎಸ್‌ನ ಕಾವೇರಿ ಗೊಂದಿ, ಹೊಸವೀರಾಪೂರ ಪ್ಲಾಟ್ ಹೆಚ್.ಪಿ.ಎಸ್‌ನ ತಜಾಬಾಯಿಬಾನು ತಗಡಿನಮನಿ, ರಾಣೇಬೆನ್ನೂರು ತಾಲೂಕಿನ ಕರೂರು ಏಜ್ಯು ಏಷಿಯಾ ಅಂತರರಾಷ್ಟ್ರೀಯ ವಸತಿ ಶಾಲೆಯ ಸಮರ್ಥ ಎಂ.ಕೆ. ಹಾಗೂ ರಾಣೇಬೆನ್ನೂರಿನ ಎಂ.ಡಿ.ಆರ್.ಎಸ್.ನ ಸಿಂಚನಾ ಆರ್. ಮುದೇನೂರು ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ತಮ್ಮ ವೈಜ್ಞಾನಿಕ ಆವಿಷ್ಕಾರ ಮಾದರಿಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ ಅಂತರರಾಷ್ಟ್ರೀಯ ಮಟ್ಟಕ್ಕೂ ಆಯ್ಕೆಯಾಗಲಿ ಎಂದು ಹಾವೇರಿ ಡಯಟ್ ಉಪನಿರ್ದೇಶಕ ಹಾಗೂ ಪ್ರಾಂಶುಪಾಲ ಝಡ್. ಎಂ. ಖಾಜಿ ಅವರು ಶುಭ ಕೋರಿದ್ದಾರೆ.

ಕಳೆದ ವರ್ಷವೂ ಹಾವೇರಿ ಜಿಲ್ಲೆಯ ಒಬ್ಬ ವಿದ್ಯಾರ್ಥಿ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿ ಜಪಾನ್‌ನಲ್ಲಿ ಭಾಗವಹಿಸಿದ್ದು, ಇದು ಜಿಲ್ಲೆಯ ಶೈಕ್ಷಣಿಕ ಹಾಗೂ ವೈಜ್ಞಾನಿಕ ಸಾಧನೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

## ಮಹಾಲಯ ಅಮಾವಾಸ್ಯೆ, ಹೆಚ್ಚುವರಿ ಸಾರಿಗೆ ಸೌಲಭ್ಯ

**ಹಾವೇರಿ:** ಮಹಾಲಯ ಅಮಾವಾಸ್ಯೆ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಹುಬ್ಬಳ್ಳಿ, ದಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 50 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ದಿನಾಂಕ 09–10–2026 ರಂದು ಶುಕ್ರವಾರ, ದಿ 10–10–2026 ರಂದು ಎರಡನೇಯ ಶನಿವಾರ ಹಾಗೂ ಮಹಾಲಯ ಅಮವಾಸ್ಯೆ ಮತ್ತು ದಿನಾಂಕ 11–10–2026 ರಂದು ಭಾನುವಾರ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ಸಂಸ್ಥೆಯ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ತೆರಳಲು ದಿನಾಂಕ 09–10–2026 ರಂದು ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

# ಜೀವ ಸಂಕುಲದ ಉಳಿವಿಗಾಗಿ ಸಸ್ಯ ಬೆಳೆಸೋಣ

**ಧಾರವಾಡ:** ಜೀವ ಸಂಕುಲದ ಉಳಿವಿಗಾಗಿ ಸಸ್ಯ ಮತ್ತು ಮರಗಳನ್ನು ಬೆಳಿಸಬೇಕಾದ ಅನಿವಾರ್ಯತೆ ಇದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಖಾಯದ ಡೀನ್ ಪ್ರೊ.ಸಿ.ಕೃಷ್ಣಮೂರ್ತಿ ಹೇಳಿದರು.

ಅವರು ಕರ್ನಾಟಕ ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ಕಾಲೇಜಿನ ಆವರಣದಲ್ಲಿ ಆಯೋಜಿಸಿದ ಸಸಿ ನೆಡುವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದರು.

ಪ್ರಸ್ತುತ ಪರಿಸರದ ಅಸಮತೋಲನದಿಂದ ನೈಸರ್ಗಿಕ ವಿಪತ್ತುಗಳು ಹೆಚ್ಚಾಗುತ್ತಿವೆ ಆದ್ದರಿಂದ ಹಸಿರು ಪರಿಸರವನ್ನು ಸಂರಕ್ಷಿಸಿ ಬೆಳಸಬೇಕಾಗಿದೆ ಎಂದ ಅವರು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಸ್ಯ ಗಿಡಮರಗಳ ಮಹತ್ವವನ್ನು ಅರಿಯಬೇಕು ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ಕಲ್ಯಾಣ ಅಧಿಕಾರಿ ಡಾ.ಸಂಗಪ್ಪ ಚಲುವಾದಿ ಮಾತನಾಡಿ ವಿಶ್ವವಿದ್ಯಾಲಯದ ಸಲಂಗ್ನ ಕಾಲೇಜುಗಳಲ್ಲಿ ಎನ್.ಎಸ್.ಎಸ್ ಚಟುವಟಿಕೆಗಳ ಮೂಲಕ ಸಸಿಗಳನ್ನು ನೆಡುವ ಯೋಜನೆ ಹಾಕಿಕೊಳ್ಳಲಾಗುವುದು ಎಂದರು.

ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ. ಎಂ.ಎಸ್. ಸಾಳುಂಕೆ ಮಾತನಾಡಿ ಮುಂಬರುವ ದಿನಗಳಲ್ಲಿ ಕಾಲೇಜಿನ ಆವರಣದಲ್ಲಿ ಇನ್ನಷ್ಟು ವಿವಿಧ



ಸಸಿಗಳನ್ನು ನೆಡುವುದು ಮತ್ತು ಹಸಿರು ಕ್ಯಾಂಪಸ್ ಗೆ ಹೆಚ್ಚು ಆದ್ಯತೆ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಕಿರಣ ಕೊಲ್ಕಾರ, ಡಾ.ಕೆ.ಕೋಟ್ರೇಶ್, ಡಾ.ಡೋರಿಸ್ ಸಿಂಗ್, ಡಾ.ಎಲ್.ಟಿ.ನಾಯಕ, ಡಾ.ಮಂಜುನಾಥ ಅಸುಂಡಿ, ಡಾ.ಅಶೋಕ ಆಲದಕಟ್ಟಿ, ಡಾ.ನಾಗೇಶ ಕುಸಲ್ ಇದ್ದರು.

# ರೈತರ ಹೋರಾಟಕ್ಕೆ ಭರ್ಜರಿ ಬೆಂಬಲ: ನವಲಗುಂದ್ ಬಂದ್ ಯಶಸ್ವಿ

**ನವಲಗುಂದ:** ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬುಧವಾರ ನವಲಗುಂದ ಬಂದ್‌ಗೆ ಕರೆ ನೀಡಲಾಗಿದ್ದು, ಪಟ್ಟಣದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಹಲವು ಅಂಗಡಿ–ಮುಂಗಟ್ಟುಗಳು ಬಂದ್ ಆಗಿದ್ದವು.

ಪಂಚಗ್ರಹ ಹಿರೇಮಠದ ಶ್ರೀ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿಗಳ ಸಮ್ಮುಖದಲ್ಲಿ ಸಾವಿರಾರು ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಹಿರೇಮಠದಿಂದ ಬೃಹತ್ ಹೋರಾಟ ಮೆರವಣಿಗೆ ನಡೆಸಿದರು. ಈ ವೇಳೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗುತ್ತಾ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಲಿಂಗರಾಜ ಸರ್ಕಲ್‌ಗೆ ತಲುಪಿದರು.

ನಂತರ ಹೋರಾಟಗಾರರು ವೀರಗಲ್ಲಿಗೆ ತೆರಳಿ, ಶ್ರೀ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿಗಳ ಸಮ್ಮುಖದಲ್ಲಿ ಮಾಲಾರ್ಪಣೆ ಸಲ್ಲಿಸಿದರು. ರೈತರ ವಿವಿಧ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರೈತರ ಸಮಸ್ಯೆಗಳಿಗೆ ಸರ್ಕಾರಗಳು ಶೀಘ್ರವಾಗಿ ಸ್ಪಂದಿಸಬೇಕು. ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ರೈತ ಮುಖಂಡರು ಎಚ್ಚರಿಕೆ ನೀಡಿದರು. ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಪ್ರಮುಖ



ಮಾರುಕಟ್ಟೆ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿತ್ತು ಶ್ರೀ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿ, ಲೋಕನಾಥ ಹೆಬಸೂರ, ವೀರೇಶ್ ಸುಬರಾದ, ಮೈಲಾರಿ ವೈದ್ಯ, ಶಿವಣಂದ್ ಕರಿಗಾರ್ ಬೈರನಹಟ್ಟಿಯ ಶಾಂತಲಿಂಗ ಸ್ವಾಮಿಗಳು, ಕೆ ಎನ್ ಗಡ್ಡಿ, ನವಲಗುಂದ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಅಲ್ಲಾಸಾಬ ಕಲಕುಟ್ರಿ, ನರಗುಂದ ಪತ್ರಿವನ ಮಠದ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಮಲ್ಲಿಕಾರ್ಜುನ ಪಾಟೀಲ್, ಶ್ರೀಶೈಲ ಮೂಲಿಮನಿ, ಬೀರಪ್ಪ ಕಾತರಕಿ, ಪ್ರೇಮ ನಾಯ್ಕರ್, ವಿಠಲ, ವಿಕ್ರಮ್ ಕುರಿ, ಸಿರಾಜ ಧಾರವಾಡ, ರಿಯಾಜ್ ನಾಶಿಪುಡಿ, ಶಿವಾನಂದ ಕರಿಗಾರಾ, ನವಲಗುಂದ ನಗರದ ವಿವಿಧ ಸಂಘಟನೆಯ ಸದಸ್ಯರು, ರೈತ ಮಹಿಳೆಯರು, ಜನಸಾಮಾನ್ಯರು, ಮುಂತಾದವರು ಪಾಲ್ಗೊಂಡಿದ್ದರು.

# ಕಡಲೆ ಬೆಳೆಯಲ್ಲಿ ಅಧಿಕ ಇಳುವರಿಗೆ ಸುಧಾರಿತ ತಾಂತ್ರಿಕತೆಗಳು

**ಗದಗ:** ಕಡಲೆ ಬೆಳೆಯಲ್ಲಿ ಉತ್ತಮ ಸುಧಾರಿತ ಇಳುವರಿ ಹಾಗೂ ಗುಣಮಟ್ಟದ ಉತ್ಪಾದನೆ ಪಡೆಯಲು ರೈತರು ಸುಧಾರಿತ ಬೇಸಯ ಕ್ರಮಗಳು ಮತ್ತು ಸಮಗ್ರ ಪೋಷಕಾಂಶ ಹಾಗೂ ನಿರ್ವಹಣಾ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು.

ಸುಧಾರಿತ, ರೋಗ ನಿರೋಧಕ, ಕಡಿಮೆ ಅವಧಿಯ ಹಾಗೂ ಒತ್ತಡ ಸಹಿಷ್ಣತೆ ತಳಿಯ ಬಿತ್ತನೆ ಬೀಜಗಳನ್ನು ಉಪಯೋಗಿಸುವುದು. ಯಾಂತ್ರೀಕೃತ ಕೂರಿಗೆ ಬಿತ್ತನೆ/ ಊರುಗಾಳು ಪದ್ಧತಿ ಅನ್ವಯ ಸರಿಯಾದ ಬೆಳೆ ಅಂತರ ಕಾಪಾಡುವುದು. (30/45 ಸೆಂ.ಮೀ 10 ಸೆಂ.ಮೀ.) ಬಿತ್ತನೆಯ ಸಮಯದಲ್ಲಿ ಎಕರೆಗೆ 8.ಕಿ.ಗ್ರಾಂ.ಮೈಕೋರೈಜಾ ಜೈವಿಕ ಗೊಬ್ಬರವನ್ನು 200 ಕಿ.ಗ್ರಾಂ.ಎರೆಹುಳು ಗೊಬ್ಬರದ ಜೊತೆಗೆ ಮಿಶ್ರಣ ಮಾಡಿ ಬಿತ್ತನೆಯ ಸಾಲಿನಲ್ಲಿ ಮಣ್ಣಿನಲ್ಲಿ ಹಾಕಿ ಬೆರೆಸಬೇಕು. ಬಿತ್ತನೆ ಮಾಡುವಾಗ ಶಿಲೀಂಧ್ರನಾಶಕಗಳಿಂದ ಹಾಗೂ ಜೈವಿಕ ಗೊಬ್ಬರಗಳಾದ ಟ್ರೈಕೊಡರ್ಮಾ, ಪಿ.ಎಸ್.ಬಿ ಮತ್ತು ರೈಜೋಬಿಯಂಗಳಿಂದ ಬೀಜೋಪಚಾರ ಕೈಗೊಳ್ಳಬೇಕು. ಕಡಲೆ ಬೆಳೆಯ ಬೆಳವಣಿಗೆ ಹಂತದಲ್ಲಿ (ಬೆಳೆ ಹಂತ : 35–40 ದಿನಗಳಲ್ಲಿ) ತಪ್ಪದೇ ಕುಡಿ ಚಿವುಟುವುದು. ಸಮಗ್ರ ಪೋಷಕಾಂಶಗಳ ಬಳಕೆಯೊಂದಿಗೆ, ಸುಧಾರಿತ ಬೇಸಾಯ ಕ್ರಮಗಳ ಪ್ರಕಾರ ಸಾವಯವ ಗೊಬ್ಬರಗಳನ್ನು ಬಳಸುವುದು. ರಸಗೊಬ್ಬರಗಳನ್ನು ಬಳಸುವುದು, ನ್ಯಾನೋ ಯೂರಿಯಾ ಇತ್ಯಾದಿಗಳನ್ನು ಬಳಸುವುದು. ದ್ವಿದಳ ಧಾನ್ಯ ಬೆಳೆ ಅವಧಿಯಲ್ಲಿ ಸೂಕ್ಷ್ಮ ಪೋಷಕಾಂಶಗಳನ್ನು ಒಳಗೊಂಡಂತೆ ಸಮಗ್ರ ಪೋಷಕಾಂಶ ನಿರ್ವಹಣೆ ಕೈಗೊಳ್ಳುವುದು. ಬೆಳೆಯಲ್ಲಿ ತೇವಾಂಶ ಕಾಪಾಡುವುದು ಮತ್ತು ಬೆಳೆಯ ಸಂದಿಗ್ಧ ಹಂತಗಳಲ್ಲಿ ನೀರು ಕೊಡಬೇಕು. ಬೇವಿನ ಬೀಜದ ಕಷಾಯ ಸಿಂಪರಣೆ, ಲಿಂಗಾಕರ್ಷಕ ಬಲೆಗಳ ಉಪಯೋಗ ಒಳಗೊಂಡಂತೆ ಸಮಗ್ರ ಪೀಡೆ ನಿರ್ವಹಣಾ ಕ್ರಮಗಳನ್ನು ಅನುಸರಿಸುವುದು.

ಬೀಜ ಮತ್ತು ರಾಸಾಯನಿಕ ಗೊಬ್ಬರಗಳನ್ನು ಏಕಕಾಲಕ್ಕೆ ಬಿತ್ತುವ ಕೂರಿಗೆಯಿಂದ 30.ಸೆಂ.ಮೀ.ಅಂತರದ ಸಾಲುಗಳಲ್ಲಿ ಬಿತ್ತನೆ ಮಾಡುವುದು ಸೂಕ್ತ. ಒಣ ಬೇಸಾಯದಲ್ಲಿ 45 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ಬಿತ್ತನೆಗೆ ಮೊದಲು ಬರ ನಿರೋಧಕತೆ ಹೆಚ್ಚಿಸಲು ಬೀಜವನ್ನು ಶೇ. 2 ರ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ 30 ನಿಮಿಷ ಅಥವಾ ಶೇ.25 ರ ಗೋಮೂತ್ರದಲ್ಲಿ 8 ಗಂಟೆಗಳ ಕಾಲ ನೆನೆಸಿ, ಕನಿಷ್ಠ 7 ಗಂಟೆ ನೆರಳಿನಲ್ಲಿ ಒಣಗಿಸಿ ಕಠಿಣಗೊಳಿಸಿ ನಂತರ ರೈಜೋಬಿಯಂ ಹಾಗೂ ರಂಜಕ ಕರಗಿಸುವ ಅಣುಜೀವಿಯಿಂದ ಉಪಚರಿಸಬೇಕು. ಪ್ರತಿ ಕಿ.ಗ್ರಾಂ.ಬೀಜಕ್ಕೆ 4.ಮಿ.ಲೀ.ಜೈವಿಕ ಗೊಬ್ಬರ ಅಣುಜೀವ ಮಿಶ್ರಣವನ್ನು ಉಪಚರಿಸಿ ಬಿತ್ತನೆ ಮಾಡಿದ 30 ಮತ್ತು 45 ದಿನಗಳ ನಂತರ 1 ಲೀ. ನೀರಿನಲ್ಲಿ 40 ಮಿ.ಲೀ.ಅಣುಜೀವಿ ಮಿಶ್ರಣವನ್ನು ಸಿಂಪರಿಸಬೇಕು. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರಗಳಿಗೆ ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸತ್ಯ ಮಿಥ್ಯ

SATY MITHI
Kannada Daily Morning

# ಬೇಕಿನ ಬೆನ್ನೇರಿ, ಬೇಡದ ಬದುಕಿನೊಳಗೆ!

ಮನುಷ್ಯ ಹುಟ್ಟುವಾಗ ಕೈಯಲ್ಲಿ ಏನನ್ನೂ ಹಿಡಿದುಕೊಂಡು ಬರುವುದಿಲ್ಲ. ಆದರೆ ಬಾಯಿ ತೆರೆದ ತಕ್ಷಣವೇ "ಬೇಕು" ಎಂಬ ಮೊದಲ ಬೇಡಿಕೆ ಆರಂಭವಾಗುತ್ತದೆ ಹಾಲು ಬೇಕು! ಸ್ವಲ್ಪ ದೊಡ್ಡವನಾದರೆ ಆಟಿಕೆ ಬೇಕು. ಶಾಲೆಗೆ ಹೋದರೆ ಹೊಸ ಬ್ಯಾಗ್ ಬೇಕು. ಕಾಲೇಜಿಗೆ ಬಂದರೆ ಮೊಬೈಲ್ ಬೇಕು. ಕೆಲಸ ಸಿಕ್ಕರೆ ಬೈಕ್ ಬೇಕು. ಮದುವೆಯಾದರೆ ಮನೆ ಬೇಕು. ಮನೆ ಸಿಕ್ಕರೆ ದೊಡ್ಡ ಮನೆ ಬೇಕು. ಕಾರು ಬಂದರೆ ಇನ್ನೂ ದೊಡ್ಡ ಕಾರು ಬೇಕು. ಕೈಯಲ್ಲಿರುವ ಮೊಬೈಲ್ ಚೆನ್ನಾಗಿಯೇ ಕೆಲಸ ಮಾಡುತ್ತಿದ್ದರೂ ಹೊಸ ಮಾದರಿ ಬೇಕು. ಕಪಾಟು ಬಟ್ಟೆಗಳಿಂದ ತುಂಬಿದ್ದರೂ ಹೊಸ ಫ್ಯಾಷನ್ ಬೇಕು. ಹೊಟ್ಟೆ ತುಂಬಲು ಅನ್ನವಿದ್ದರೂ ಹೊಸ ಹೊಸ ರುಚಿ ಬೇಕು. ಹೀಗೆ "ಬೇಕು" ಎಂಬ ಒಂದು ಸಣ್ಣ ಪದ ನಿಧಾನವಾಗಿ ಮನುಷ್ಯನ ಬದುಕಿನ ದೊಡ್ಡ ಚಾಲಕನಾಗಿ ಬಿಟ್ಟಿದೆ. ಆದರೆ ಈ ಚಾಲಕ ಎಲ್ಲಿಗೆ ಕರೆದೊಯ್ಯುತ್ತಿದ್ದಾನೆ ಎಂಬುದು ಪ್ರಯಾಣಿಕನಿಗೇ ಗೊತ್ತಿಲ್ಲ! ಒಂದು ದಿನ ಬದುಕಿನ ಕೊನೆಯ ಹಂತದಲ್ಲಿ ಹಿಂದಿರುಗಿ ನೋಡಿದಾಗ, "ನಾನು ಇಷ್ಟು ವರ್ಷ ಬದುಕಿದ್ದೇನಾ? ಅಥವಾ ಬೇಕುಗಳ ಹಿಂದೆ ಓಡಿದ್ದೇನಾ?" ಎಂಬ ಪ್ರಶ್ನೆ ಎದುರಾಗಬಹುದು.



ನಿಜವಾಗಿ ನೋಡಿದರೆ ಮನುಷ್ಯನಿಗೆ ಬೇಕಾಗಿರುವುದು ಬಹಳ ಕಡಿಮೆ. ಆದರೆ ಬೇಕೆನಿಸುವುದು ಮಾತ್ರ ಅಸಂಖ್ಯಾತ. ಅಗತ್ಯ ಮತ್ತು ಆಸೆಗಳ ನಡುವಿನ ವ್ಯತ್ಯಾಸವನ್ನು ಅರಿಯದಾದಾಗಲೇ ಸಮಸ್ಯೆ ಆರಂಭವಾಗುತ್ತದೆ. ಹಸಿವಾದರೆ ಊಟ ಬೇಕು. ಮಳೆ ಬಂದರೆ ಛತ್ರಿ ಬೇಕು. ಚಳಿಯಾದರೆ ಬೆಚ್ಚಗಿನ ಬಟ್ಟೆ ಬೇಕು. ಓದಲು ಪುಸ್ತಕ ಬೇಕು. ಬದುಕಲು ಒಂದು ಸುರಕ್ಷಿತ ಮನೆ ಬೇಕು. ಇವು ಬದುಕಿನ ಮೂಲ ಅಗತ್ಯಗಳು. ಆದರೆ ಅಗತ್ಯ ಮುಗಿದ ನಂತರವೂ "ಇನ್ನಷ್ಟು ಬೇಕು" ಎನ್ನುವ ಮನಸ್ಥಿತಿ ಬೆಳೆದಾಗ ಜೀವನದ ಸರಳತೆ ನಿಧಾನವಾಗಿ ಕಳೆದುಹೋಗುತ್ತದೆ. ಮಾರುಕಟ್ಟೆ ಕೂಡ ಇದೇ ಮನಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡಿದೆ. "ನಿಮ್ಮ ಬಳಿ ಇದು ಇಲ್ಲವೇ?" ಎಂದು ಅದು ಪ್ರತಿದಿನ ನಮ್ಮನ್ನು ಪ್ರಶ್ನಿಸುತ್ತದೆ. ನಮಗೆ ಬೇಕಿಲ್ಲದ ವಸ್ತುವನ್ನು ಮೊದಲು ತೋರಿಸಿ, ನಂತರ ಅದೇ ನಮ್ಮ ಬದುಕಿಗೆ ಅಗತ್ಯ ಎಂದು ನಂಬಿಸುವುದು ಇಂದಿನ ವ್ಯಾಪಾರದ ದೊಡ್ಡ ತಂತ್ರ! ಮನೆಯೆಂಬ ಆಸರೆ ಪ್ರತಿಯೊಂದು ಜೀವಿಗೂ ಅಗತ್ಯ. ಮನುಷ್ಯನಾಗಲಿ, ಪ್ರಾಣಿಯಾಗಲಿ, ಪಕ್ಷಿಯಾಗಲಿ ದಿನದ ಕೊನೆಯಲ್ಲಿ ಸುರಕ್ಷಿತವಾಗಿ ಮರಳಲು ಒಂದು ತಾಣ ಬೇಕು. ಹಕ್ಕಿ ಕಡ್ಡಿಗಳನ್ನು ಕಲೆಹಾಕಿ ಗೂಡು ಕಟ್ಟುತ್ತದೆ. ಇರುವೆ ಕಣಕಣ ಸೇರಿಸಿ ತನ್ನ ಗೂಡು ನಿರ್ಮಿಸುತ್ತದೆ. ಪ್ರಾಣಿಗಳು ಬಿಸಿಲು, ಮಳೆ, ಗಾಳಿಯಿಂದ ರಕ್ಷಿಸಿಕೊಳ್ಳಲು ಆಶ್ರಯ ಹುಡುಕುತ್ತವೆ. ಹಾಗೆಯೇ ಮನುಷ್ಯನಿಗೂ ಮನೆ ಬೇಕು. ಮನೆ ಎಂದರೆ ಕೇವಲ ನಾಲ್ಕು ಗೋಡೆಗಳ ಕಟ್ಟಡವಲ್ಲ; ಅದು ಸುರಕ್ಷತೆ, ನೆಮ್ಮದಿ, ಸಂಬಂಧ, ಪ್ರೀತಿ ಮತ್ತು ನೆನಪುಗಳ ಆಸರೆ. ಆದರೆ ಇಂದು "ಮನೆ ಬೇಕು" ಎನ್ನುವ ಸಹಜ ಅಗತ್ಯ ನಿಧಾನವಾಗಿ "ದೊಡ್ಡ ಮನೆ ಬೇಕು, ಇನ್ನೂ ದೊಡ್ಡ ಮನೆ ಬೇಕು, ಎಲ್ಲರಿಗಿಂತ ದೊಡ್ಡ ಮನೆ ಬೇಕು" ಎಂಬ ಪ್ರದರ್ಶನದ ಆಸೆಯಾಗಿ ಬದಲಾಗುತ್ತಿದೆ. ವಾಸಕ್ಕೆ ಮನೆ ಸಾಕಾಗುವುದಿಲ್ಲ; ಮನೆಯ ಮುಂದೆ ದೊಡ್ಡ ಕಾರು ನಿಲ್ಲಿಸಲು ಜಾಗ ಬೇಕು, ಒಳಗೆ ದುಬಾರಿ ಪೀಠೋಪಕರಣ ಬೇಕು, ಅಲಂಕಾರ ಬೇಕು, ಪ್ರತಿ ಕೋಣೆಯಲ್ಲೂ ಹೊಸ ವಸ್ತುಗಳು ಬೇಕು. ಮನೆ ದೊಡ್ಡದಾಗುತ್ತಾ ಹೋಗುತ್ತದೆ; ಆದರೆ ಅದರೊಳಗಿನ ಮಾತುಕತೆ, ನಗು ಮತ್ತು ಆತ್ಮೀಯತೆ ಮಾತ್ರ ಕೆಲವೊಮ್ಮೆ ಚಿಕ್ಕದಾಗುತ್ತಾ ಹೋಗುತ್ತದೆ. ಹಕ್ಕಿಗೆ ಗೂಡು ಸಾಕು; ಮನುಷ್ಯನಿಗೆ ಮಾತ್ರ ಗೂಡಿಗೂ ಗಾತ್ರದ ಲೆಕ್ಕ! "ನನ್ನ ಮನೆ ಎಷ್ಟು ದೊಡ್ಡದು?" ಎಂಬ ಪ್ರಶ್ನೆಗಿಂತ "ನನ್ನ ಮನೆಯಲ್ಲಿ ಎಷ್ಟು ನೆಮ್ಮದಿ ಇದೆ?" ಎಂಬ ಪ್ರಶ್ನೆ ಮುಖ್ಯವಾಗಬೇಕಿತ್ತು. ಆದರೆ ಸಮಾಜದ ಅಳತೆಗೋಲು ಬದಲಾಗಿದೆ. ಮನೆ ಈಗ ಕೆಲವೊಮ್ಮೆ ವಾಸದ ಸ್ಥಳಕ್ಕಿಂತ ಪ್ರತಿಷ್ಠೆಯ ಸಂಕೇತವಾಗಿದೆ. ನೆರೆಮನೆಯವರು ಎರಡು ಅಂತಸ್ತಿನ ಮನೆ ಕಟ್ಟಿದರೆ ನಮಗೆ ಮೂರು ಅಂತಸ್ತು ಬೇಕು. ಅವರು ಹೊಸ ಕಾರು ತಂದರೆ ನಮಗೆ ಇನ್ನೂ ದುಬಾರಿ ಕಾರು ಬೇಕು. ಅವರು ಮನೆಯ ಮುಂದೆ ಅಲಂಕಾರ ಮಾಡಿದರೆ ನಮಗೂ ಮಾಡಬೇಕು. ಹೀಗೆ ಮನೆ ಆಸರೆಯಾಗಬೇಕಾದ ಜಾಗದಲ್ಲಿ ಹೋಲಿಕೆಯ ವೇದಿಕೆಯಾಗುತ್ತದೆ. ಮನೆಯ ಗಾತ್ರ ಹೆಚ್ಚಾದರೆ ಅದು ದೊಡ್ಡ ಮನೆ; ಆದರೆ ಮನೆಯೊಳಗಿನ ಮನಸ್ಸುಗಳು ದೊಡ್ಡದಾದಾಗ ಮಾತ್ರ ಅದು ನಿಜವಾದ ಮನೆ. ಮನೆ ಕಟ್ಟುವುದು ತಪ್ಪಲ್ಲ. ಉತ್ತಮ ಸೌಲಭ್ಯಗಳಿರುವ ಮನೆ ಹೊಂದುವ ಆಸೆಯೂ ತಪ್ಪಲ್ಲ. ಆದರೆ ಮನೆ ನಮ್ಮ ಬದುಕಿಗೆ ಆಸರೆಯಾಗಬೇಕೇ ಹೊರತು, ನಮ್ಮ ಬದುಕೇ ಮನೆಯ ಸಾಲದ ಕಂತು ತೀರಿಸುವ ಯಂತ್ರವಾಗಬಾರದು.

ಬ್ಯಾಂಕಿನಿಂದ ಸಾಲ ಪಡೆದು ಮನೆ ಕಟ್ಟುತ್ತೇವೆ; ನಂತರ ವರ್ಷಗಳ ಕಾಲ ಆ ಸಾಲ ತೀರಿಸಲು ದುಡಿಯುತ್ತೇವೆ. ಕುಟುಂಬದೊಂದಿಗೆ ಸಮಯ ಕಳೆಯಬೇಕಾದ ವಯಸ್ಸಿನಲ್ಲಿ ಕಂತುಗಳ ಲೆಕ್ಕ ಹಾಕುತ್ತೇವೆ. "ಮನೆ ನನ್ನದು" ಎಂದು ಹೆಮ್ಮೆಯಿಂದ ಹೇಳುತ್ತೇವೆ; ಆದರೆ ಕೆಲವೊಮ್ಮೆ ಆ ಮನೆಯ ಸಾಲವೇ ನಮ್ಮ ಸಮಯ, ಶ್ರಮ ಮತ್ತು ನೆಮ್ಮದಿಯನ್ನು ತನ್ನದಾಗಿಸಿಕೊಂಡಿರುತ್ತದೆ. ಮನುಷ್ಯ ಮನೆಯ ಮಾಲೀಕನಾಗಿರಬೇಕು; ಮನೆಯೇ ಮನುಷ್ಯನ ಮಾಲೀಕನಾಗಬಾರದು. ಇದೇ ಕಥೆ ಮೊಬೈಲ್‌ನಲ್ಲೂ ಕಾಣುತ್ತದೆ. ಕೈಯಲ್ಲಿರುವ ಮೊಬೈಲ್ ಕರೆ ಮಾಡುತ್ತದೆ, ಸಂದೇಶ ಕಳುಹಿಸುತ್ತದೆ, ಫೋಟೋ ತೆಗೆಯುತ್ತದೆ, ವಿಡಿಯೋ ತೋರಿಸುತ್ತದೆ, ಕೆಲಸ ಮಾಡಿಸುತ್ತದೆ. ಅದರ ಕೆಲಸ ಮುಗಿದೇ ಹೋಗಿದೆ. ಆದರೆ ಮಾರುಕಟ್ಟೆಗೆ ಹೊಸ ಮಾದರಿ ಬಂದ ತಕ್ಷಣ ಹಳೆಯ ಮೊಬೈಲ್ ಏಕಾಏಕಿ "ಹಳೆಯದು" ಎನಿಸುತ್ತದೆ! "ಇದು ಇನ್ನೂ ಚೆನ್ನಾಗಿಯೇ ಕೆಲಸ ಮಾಡುತ್ತಿದೆ" ಎಂದು ನಮಗೆ ಗೊತ್ತಿದ್ದರೂ ಮನಸ್ಸು ಮಾತ್ರ ಹೇಳುತ್ತದೆ "ಹೊಸದನ್ನು ತೆಗೆದುಕೊಳ್ಳಬೇಕು!" ಏಕೆ? "ಅದು ಎಲ್ಲರ ಬಳಿಯೂ ಇದೆ!" ಎಂಬ ಒಂದೇ ಕಾರಣ. ಪಕ್ಕದ ಮನೆಯವನ ಮೊಬೈಲ್ ನಮ್ಮ ಅಗತ್ಯದ ಅಳತೆಗೋಲಾದಾಗ, ನಮ್ಮ ಜೇಬು ಮಾತ್ರವಲ್ಲ ನಮ್ಮ ಸ್ವತಂತ್ರ ಚಿಂತನೆಯೂ ಖಾಲಿಯಾಗುತ್ತದೆ. ಇಂದು ಆನ್‌ಲೈನ್ ಶಾಪಿಂಗ್ ಈ "ಬೇಕು" ಸಂಸ್ಕೃತಿಗೆ ಇನ್ನಷ್ಟು ಬಲ ನೀಡಿದೆ. ಹಿಂದೆ ಅಂಗಡಿಗೆ ಹೋಗಿ ವಸ್ತು ನೋಡಿ, ಬೆಲೆ ಕೇಳಿ, ಅಗತ್ಯವಿದೆಯೇ ಎಂದು ಯೋಚಿಸಿ ಖರೀದಿಸುತ್ತಿದ್ದೆವು. ಈಗ ಮೊಬೈಲ್‌ನಲ್ಲಿ ಬೆರಳು ಜಾರಿದರೆ ಸಾಕು ವಸ್ತು ಬಾಗಿಲಿಗೆ ಬರುತ್ತದೆ. "ಇದು ನಿಮಗೆ ಇಷ್ಟವಾಗಬಹುದು", "ಇಂದು ಮಾತ್ರ ಆಫರ್", "ಇನ್ನೂ ಕೆಲವೇ ವಸ್ತುಗಳು ಉಳಿದಿವೆ" ಎಂಬ ಸಂದೇಶಗಳು ನಮ್ಮೊಳಗಿನ ಆಸೆಗೆ ಬೆಂಕಿ ಹಚ್ಚುತ್ತವೆ. ನಮಗೆ ವಸ್ತು ಬೇಕಿತ್ತೋ, ಆ ವಸ್ತುವಿಗೆ ನಮ್ಮ ಹಣ ಬೇಕಿತ್ತೋ ಗೊತ್ತಾಗದ ಸ್ಥಿತಿ! ಖರೀದಿಸುವ ಕ್ಷಣದಲ್ಲಿ ಅತ್ಯಗತ್ಯವೆನಿಸಿದ ವಸ್ತು ಕೆಲವೇ ದಿನಗಳಲ್ಲಿ ಮನೆಯ ಮೂಲೆಯಲ್ಲಿ ಧೂಳು ಹಿಡಿದುಕೊಂಡಿರುತ್ತದೆ. ಮಕ್ಕಳ ಬದುಕಿನಲ್ಲಿಯೂ ಇದೇ ಬದಲಾವಣೆ ಕಾಣುತ್ತಿದೆ. ಮಗು ಏನು ಕೇಳಿದರೂ ಕೊಡಿಸುವುದೇ ಪ್ರೀತಿ ಎಂಬ ತಪ್ಪು ಕಲ್ಪನೆ ಬೆಳೆದಿದೆ. ಮೊಬೈಲ್ ಬೇಕು ಕೊಡಿಸುತ್ತೇವೆ. ದುಬಾರಿ ಆಟಿಕೆ ಬೇಕು ಕೊಡಿಸುತ್ತೇವೆ. ಬ್ರ್ಯಾಂಡ್ ಬಟ್ಟೆ ಬೇಕು ಕೊಡಿಸುತ್ತೇವೆ. ಹೊಸ ಸೈಕಲ್ ಬೇಕು ಕೊಡಿಸುತ್ತೇವೆ. ಆದರೆ "ಇದು ಈಗ ಅಗತ್ಯವಿಲ್ಲ" ಎಂದು ಹೇಳುವ ಪಾಠ ಮಾತ್ರ ಕಲಿಸುವುದಿಲ್ಲ. ಪರಿಣಾಮವಾಗಿ ಮಕ್ಕಳಿಗೆ ಸಿಗದ ವಸ್ತುವಿನ ನೋವು ಹೆಚ್ಚುತ್ತದೆ; ಸಿಕ್ಕ ವಸ್ತುವಿನ ಸಂತೋಷ ಕಡಿಮೆಯಾಗುತ್ತದೆ. ನಾಳೆ ಅವರು ದೊಡ್ಡವರಾದಾಗಲೂ ಇದೇ "ಬೇಕೆ" ಮನಸ್ಥಿತಿ ಮುಂದುವರಿಯುತ್ತದೆ. ಹಣ ಸಂಪಾದಿಸುವುದರಲ್ಲಿ ತಪ್ಪಿಲ್ಲ. ಉತ್ತಮ ಜೀವನ ನಡೆಸುವ ಆಸೆಯಲ್ಲೂ ತಪ್ಪಿಲ್ಲ. ಸಮಸ್ಯೆ ಶುರುವಾಗುವುದು "ಎಷ್ಟು ಸಾಕು?" ಎಂಬ ಪ್ರಶ್ನೆಯನ್ನು ನಾವು ಕೇಳುವುದನ್ನು ನಿಲ್ಲಿಸಿದಾಗ. ಆದಾಯ ಹೆಚ್ಚಾದಂತೆ ಜೀವನಮಟ್ಟ ಸುಧಾರಿಸಬೇಕು. ಆದರೆ ಆದಾಯದ ಜೊತೆಗೆ ಆಸೆಗಳು, ಸಾಲಗಳು, ಖರ್ಚುಗಳು ಮತ್ತು ಹೋಲಿಕೆಗಳೂ ಹೆಚ್ಚುತ್ತಾ ಹೋದರೆ ನೆಮ್ಮದಿ ಎಲ್ಲಿಂದ ಬರಬೇಕು? ಒಂದು ಕಾಲದಲ್ಲಿ ಎರಡು ಸಂಬಳಗಳಲ್ಲಿ ಕುಟುಂಬ ನೆಮ್ಮದಿಯಿಂದ ಬದುಕುತ್ತಿತ್ತು; ಇಂದು ಎರಡು ಸಂಬಳಗಳಿದ್ದರೂ ತಿಂಗಳ ಕೊನೆಯಲ್ಲಿ ಲೆಕ್ಕ ಸರಿಯಾಗುವುದಿಲ್ಲ. ಸೌಲಭ್ಯಗಳು ಹೆಚ್ಚಿವೆ, ಆದರೆ ಅವುಗಳನ್ನು ಪಡೆಯಲು ಬೇಕಾದ ಒತ್ತಡವೂ ಹೆಚ್ಚಾಗಿದೆ. "ಸಮಯ ಉಳಿಸಲು" ನಾವು ಸೌಲಭ್ಯಗಳನ್ನು ಖರೀದಿಸುತ್ತೇವೆ; ಆದರೆ ಆ ಸೌಲಭ್ಯಗಳನ್ನು ಖರೀದಿಸಲು ಹಣ ಸಂಪಾದಿಸುವುದರಲ್ಲಿ ನಮ್ಮ ಸಮಯವನ್ನೇ ಕಳೆದುಕೊಳ್ಳುತ್ತೇವೆ. ಅಡುಗೆ ಮಾಡಲು ಸಮಯವಿಲ್ಲವೆಂದು ಹೊರಗಿನಿಂದ ಆಹಾರ ತರಿಸುತ್ತೇವೆ. ಮನೆಯವರೊಂದಿಗೆ ಕುಳಿತು ಊಟ ಮಾಡಲು ಸಮಯವಿಲ್ಲ. ಮಕ್ಕಳೊಂದಿಗೆ ಮಾತನಾಡಲು ಸಮಯವಿಲ್ಲ. ಹಿರಿಯರ ಬಳಿ ಕುಳಿತು ಅವರ ಮಾತು ಕೇಳಲು ಸಮಯವಿಲ್ಲ. ಆದರೆ ಸಾಮಾಜಿಕ ಜಾಲತಾಣದಲ್ಲಿ ಗಂಟೆಗಟ್ಟಲೆ ಕಳೆಯಲು ಮಾತ್ರ ಸಮಯವಿದೆ. "ಸಮಯವಿಲ್ಲ" ಎನ್ನುವುದು ಬಹಳ ಬಾರಿ ಸಮಯದ ಕೊರತೆಯಲ್ಲ; ಆದ್ಯತೆಗಳ ಗೊಂದಲ. ಮನುಷ್ಯ ಈಗ ವಸ್ತುಗಳಿಗಾಗಿ ಮಾತ್ರವಲ್ಲ, ಪ್ರತಿಷ್ಠೆಗಾಗಿ ಕೂಡ ಬೇಕುಗಳ ಹಿಂದೆ ಓಡುತ್ತಿದ್ದಾನೆ. ನನಗೆ ಗೌರವ ಬೇಕು. ಎಲ್ಲರೂ ನನ್ನನ್ನು ಗುರುತಿಸಬೇಕು. ನನ್ನ ಮಗ ದೊಡ್ಡ ಉದ್ಯೋಗದಲ್ಲಿರಬೇಕು. ನನ್ನ ಮಗಳು ಎಲ್ಲರಿಗಿಂತ ಮುಂದೆ ಇರಬೇಕು. ನನ್ನ ಮನೆ ಎಲ್ಲರಿಗಿಂತ ಚೆನ್ನಾಗಿರಬೇಕು. ನನ್ನ ಮದುವೆ ಅದ್ಧೂರಿಯಾಗಿರಬೇಕು. ನನ್ನ ಕಾರ್ಯಕ್ರಮದ ಫೋಟೋ ಸಾಮಾಜಿಕ ಜಾಲತಾಣದಲ್ಲಿ ಎಲ್ಲರಿಗಿಂತ ಹೆಚ್ಚು ಕಾಣಬೇಕು. ಹೀಗೆ ಜೀವನವೇ ಪ್ರದರ್ಶನವಾಗುತ್ತಿದೆ. ಹಿಂದೆ ಸಂತೋಷಕ್ಕಾಗಿ ಬದುಕುತ್ತಿದ್ದೆವು; ಈಗ ಸಂತೋಷವಿದೆ ಎಂದು ತೋರಿಸಲು ಬದುಕುತ್ತಿರುವ ಸ್ಥಿತಿ! ನಿಜವಾದ ಶ್ರೀಮಂತಿಕೆ ಎಂದರೆ ಎಲ್ಲವನ್ನೂ ಹೊಂದಿರುವುದಲ್ಲ; ಎಲ್ಲವೂ ಬೇಕಾಗದ ಸ್ಥಿತಿಗೆ ಮನಸ್ಸನ್ನು ಬೆಳೆಸುವುದು. "ಇದು ನನಗೆ ಅಗತ್ಯವಿಲ್ಲ" ಎಂದು ಹೇಳುವ ಸಾಮರ್ಥ್ಯವೂ ಒಂದು ಸಂಪತ್ತು. ಅನಗತ್ಯ ಖರ್ಚಿಗೆ ಬೇಡ ಎನ್ನುವುದು ಆರ್ಥಿಕ ಶಿಸ್ತು. ಅತಿಯಾದ ಆಹಾರಕ್ಕೆ ಬೇಡ ಎನ್ನುವುದು ಆರೋಗ್ಯದ ಕಾಳಜಿ. ಅನಗತ್ಯ ಮೊಬೈಲ್ ಬಳಕೆಗೆ ಬೇಡ ಎನ್ನುವುದು ಸಮಯದ ರಕ್ಷಣೆ. ಅತಿಯಾದ ಹೋಲಿಕೆಗೆ ಬೇಡ ಎನ್ನುವುದು ಮನಸ್ಸಿನ ರಕ್ಷಣೆ. ಅನಗತ್ಯ ವಾದಕ್ಕೆ ಬೇಡ ಎನ್ನುವುದು ಸಂಬಂಧಗಳ ರಕ್ಷಣೆ. ಜೀವನವೆಂದರೆ ಬೇಕುಗಳ ಪಟ್ಟಿಯನ್ನು ಮುಗಿಸುವ ಯೋಜನೆಯಲ್ಲ. ಸಿಕ್ಕಿರುವುದನ್ನು ಅರ್ಥಮಾಡಿಕೊಂಡು, ಅಗತ್ಯವನ್ನು ಗುರುತಿಸಿ, ಅನಗತ್ಯವನ್ನು ಬಿಟ್ಟು, ಸಂಬಂಧಗಳನ್ನು ಉಳಿಸಿಕೊಂಡು, ನೆಮ್ಮದಿಯನ್ನು ಕಂಡುಕೊಳ್ಳುವ ಪಯಣ. ನಮ್ಮ ಬಳಿ ಇರುವ ವಸ್ತುಗಳು ನಮ್ಮ ಜೀವನವನ್ನು ಸುಲಭಗೊಳಿಸುತ್ತಿವೆಯೇ? ಅಥವಾ ಅವುಗಳನ್ನು ಪಡೆಯಲು ನಾವು ನಮ್ಮ ಜೀವನವನ್ನೇ ಕಷ್ಟಪಡಿಸುತ್ತಿದ್ದೇವೆಯೇ? ಈ ಪ್ರಶ್ನೆಯನ್ನು ಪ್ರತಿಯೊಬ್ಬರೂ ತಮ್ಮೊಳಗೆ ಕೇಳಿಕೊಳ್ಳಬೇಕು. ಕೊನೆಗೆ "ಬೇಕು" ಎನ್ನುವುದನ್ನು ಸಂಪೂರ್ಣವಾಗಿ ತ್ಯಜಿಸಬೇಕಿಲ್ಲ. ಬದುಕಿಗೆ ಬೇಕಾದದ್ದು ಬೇಕೇಬೇಕು. ಮನೆ ಬೇಕು, ಆಹಾರ ಬೇಕು, ಶಿಕ್ಷಣ ಬೇಕು, ಆರೋಗ್ಯ ಬೇಕು, ಭದ್ರತೆ ಬೇಕು, ಪ್ರೀತಿ ಬೇಕು. ಆದರೆ ಅಗತ್ಯ ಮುಗಿದ ನಂತರ ಆರಂಭವಾಗುವ ಅತಿಯಾದ ಆಸೆಗೆ ಒಂದು ಗಡಿ ಬೇಕು. ಏಕೆಂದರೆ ಬೇಕಿನ ಬೆನ್ನೇರಿ ಓಡುತ್ತಾ ಬೇಡದ ಬದುಕಿನೊಳಗೆ ಸಿಲುಕಿಕೊಳ್ಳುವುದು ಸುಲಭ; ಆದರೆ "ಸಾಕು" ಎನ್ನುವಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುವುದು ನಿಜವಾದ ಬದುಕಿನ ಜಾಣ್ಮೆ. ಹೀಗಾಗಿ ನಮ್ಮ ಪ್ರಶ್ನೆ "ನನಗೆ ಇನ್ನೇನು ಬೇಕು?" ಎಂಬುದಾಗಿರಬಾರದು. ಕೆಲವೊಮ್ಮೆ "ನನ್ನ ಬಳಿ ಇರುವುದರಲ್ಲಿ ನಿಜವಾಗಿಯೂ ಎಷ್ಟು ಸಾಕು?" ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕು. ಬೇಕಿನ ಓಟಕ್ಕೆ ಬ್ರೇಕ್ ಹಾಕದಿದ್ದರೆ ಒಂದು ದಿನ ವಸ್ತುಗಳು ನಮ್ಮ ಸುತ್ತ ತುಂಬಿರುತ್ತವೆ; ಆದರೆ ಬದುಕು ಮಾತ್ರ ನಮ್ಮ ಕೈಯಿಂದ ಜಾರಿರುತ್ತದೆ. ಮನೆ ದೊಡ್ಡದಿರಲಿ, ಆದರೆ ಮನಸ್ಸು ಅದಕ್ಕಿಂತ ದೊಡ್ಡದಾಗಿರಲಿ. ಸೌಲಭ್ಯಗಳು ಇರಲಿ, ಆದರೆ ಅವುಗಳ ಗುಲಾಮರಾಗಬಾರದು. ಆಸೆಗಳು ಇರಲಿ, ಆದರೆ ಅವುಗಳಿಗೆ ನಾವು ಮಾಲೀಕರಾಗಿರಬೇಕು. ಬದುಕಿಗೆ ಬೇಕಾದಷ್ಟು ಬೇಕು; ಬದುಕನ್ನೇ ನುಂಗುವಷ್ಟು ಬೇಕು ಬೇಡ!



ಅನಂತ ಪಪ್ಪು,
ಬೆಳಗಾವಿ
ಮೋ:9448527870

## ಗೋವಾ ವಿಧಾನಸಭಾ ಸಂಕೀರ್ಣದ ರಜತ ಮಹೋತ್ಸವ: ಕರ್ನಾಟಕ ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ ಭಾಗಿ

**ಗದಗ:** ಗೋವಾ ವಿಧಾನಸಭೆಯ ನೂತನ ಕಟ್ಟಡ ನಿರ್ಮಾಣಗೊಂಡು 25 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಬುಧವಾರ (ಅ.7) ಆಯೋಜಿಸಲಾಗಿದ್ದ ರಜತ ಮಹೋತ್ಸವ ಸಮಾರಂಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಜಿ.ಎಸ್. ಪಾಟೀಲ ಅವರು ವಿಶೇಷ ಆಹ್ವಾನಿತ ಅತಿಥಿಯಾಗಿ ಭಾಗವಹಿಸಿದರು.

ಸಮಾರಂಭಕ್ಕೆ ವಿಶೇಷ ಆಹ್ವಾನಿತ ಅತಿಥಿಯಾಗಿ ಆಗಮಿಸಿದ ಕರ್ನಾಟಕ ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ ಅವರನ್ನು ಗೋವಾ ರಾಜ್ಯಪಾಲರಾದ ಪುಷ್ಪಪತಿ ಅಶೋಕ್ ಗಜಪತಿ ರಾಜು ಹಾಗೂ ಮುಖ್ಯಮಂತ್ರಿ ಡಾ. ಪ್ರಮೋದ ಸಾವಂತ್ ಅವರು ಹೂಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ಇದೇ ಸಂದರ್ಭದಲ್ಲಿ ಅವರನ್ನು ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ಗೋವಾ ವಿಧಾನಸಭಾ ಸಂಕೀರ್ಣವು 25 ವರ್ಷಗಳ ಸ್ವರ್ಣಯಾತ್ರೆಯನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ನಡೆದ ಈ ಸಮಾರಂಭವು ರಾಜ್ಯದ ಶಾಸಕರಿಗೆ ಪರಂಪರೆ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಜನಪ್ರತಿನಿಧಿ ಸಂಸ್ಥೆಗಳ ಮಹತ್ವವನ್ನು ಪ್ರತಿಬಿಂಬಿಸಿತು. ವಿಧಾನಸಭಾ ವ್ಯವಸ್ಥೆಯ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವುದು ಹಾಗೂ ಪ್ರಜಾಪ್ರಭುತ್ವದ ಆಶಯಗಳನ್ನು ಮತ್ತಷ್ಟು ಬಲಪಡಿಸುವ ಕುರಿತು ಸಮಾರಂಭದಲ್ಲಿ ಒತ್ತು ನೀಡಲಾಯಿತು.

ಕರ್ನಾಟಕ ವಿಧಾನಸಭಾಧ್ಯಕ್ಷರಾಗಿ ಜಿ.ಎಸ್. ಪಾಟೀಲ ಅವರು ಸಮಾರಂಭದಲ್ಲಿ ಪಾಲ್ಗೊಂಡಿರುವುದು ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವಿನ ಸೌಹಾರ್ದತೆ, ಸಹಕಾರ ಹಾಗೂ ಬಾಂಧವ್ಯದ ಸಂಕೇತವಾಗಿದೆ. ಉಭಯ ರಾಜ್ಯಗಳ ವಿಧಾನಸಭೆಗಳ ನಡುವಿನ ಪರಸ್ಪರ ಅನುಭವ ವಿನಿಮಯ ಹಾಗೂ ಉತ್ತಮ ಸಂಸದೀಯ ಪರಂಪರೆಗಳನ್ನು ಬೆಳೆಸಲು ಇಂತಹ ಕಾರ್ಯಕ್ರಮಗಳು ಮಹತ್ವದ ವೇದಿಕೆಯಾಗಿವೆ.

ಸಮಾರಂಭದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಗೋವಾ ರಾಜ್ಯಪಾಲ ಪುಷ್ಪಪತಿ ಅಶೋಕ್ ಗಜಪತಿ ರಾಜು, ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ ಸಾವಂತ್, ವಿಧಾನಸಭಾ ಸದಸ್ಯ ಮಾವಿನ್ ಗುಡಿನ್ಹೊ, ಗೋವಾ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಯುರಿ ಅಲೆಮಾವ್ ಸೇರಿದಂತೆ ಗೋವಾ ವಿಧಾನಸಭೆಯ ಸದಸ್ಯರು, ಗಣ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



## ಕ್ರೀಡೆಯಿಂದ ಮಾನಸಿಕ ಒತ್ತಡಕ್ಕೆ ಮುಕ್ತಿ ಸರ್ವಾಂಗೀಣ ವಿಕಾಸ ಸಾಧ್ಯ : ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ

**ಗದಗ:** ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ "ಕೇವಲ ಓದು, ಬರವಣಿಗೆ, ಮನೆಕೆಲಸಗಳಿಗೆ ಸೀಮಿತವಾಗದೆ, ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಜೀವನದ ಮಾನಸಿಕ ಒತ್ತಡ ಕಡಿಮೆಯಾಗಿ ಸರ್ವಾಂಗೀಣ ವಿಕಾಸ ಸಾಧ್ಯವಾಗುತ್ತದೆ" ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಅವರು ಹೇಳಿದರು.

ನಗರದ ಗದಗ-ಬೆಟಗೇರಿಯ ಲೊಯಲಾ ಪ್ರಾಥಮಿಕ ಪ್ರೌಢಶಾಲೆಯ ಆವರಣದಲ್ಲಿ ಬುಧವಾರ ಅಕ್ಟೋಬರ (7) ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಇಲಾಖೆ, ಇವರ ಸಹಯೋಗದಲ್ಲಿ 2026-27ನೇ ಸಾಲಿನ ಬೆಳಗಾವಿ ವಿಭಾಗ ಮಟ್ಟದ 14/17 ವಯೋಮಿತಿಯ ಬಾಲಕ ಬಾಲಕಿಯರ ಬಾಸ್ಕೆಟ್‌ಬಾಲ್ ಕ್ರೀಡಾಕೂಟ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಯಲ್ಲಿ ವ್ಯಕ್ತಿಗತ ಆಟಗಳಿಗಿಂತ ತಂಡದ ಆಟಗಳು ಹೆಚ್ಚು ಸವಾಲಿನದ್ದಾಗಿರುತ್ತವೆ. ಇಲ್ಲಿ ಎಲ್ಲರೂ ಒಂದಾಗಿ, ಪರಸ್ಪರ ಸಾಮರಸ್ಯದಿಂದ ಆಡುವುದು ಮತ್ತು ಒಗ್ಗಟ್ಟಿನಿಂದ ಆಲೋಚಿಸುವುದು ಅತ್ಯಗತ್ಯ" ಎಂದರು.

ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ: "ಕ್ರೀಡೆಯಲ್ಲಿ ಗೆಲುವು ಅಥವಾ ಸೋಲು ಒಂದು ಘಟನೆ ಅಷ್ಟೇ, ಆದರೆ ಪಂದ್ಯಾವಳಿಯಲ್ಲಿ ಭಾಗವಹಿಸುವ ಪ್ರಕ್ರಿಯೆ ಮತ್ತು ಕ್ರೀಡಾ ಮನೋಭಾವ ಮುಖ್ಯ. ಸೋತ ತಕ್ಷಣವೇ ಕ್ರೀಡಾಪಟುಗಳು ನಿರಾಶರಾಗಬಾರದು. ಆಯಾ ದಿನದ ಪ್ರದರ್ಶನ ಗೆಲುವನ್ನು ನಿರ್ಧರಿಸುತ್ತದೆಯೇ ಹೊರತು, ಕ್ರೀಡಾಪಟುವಿನ ಪ್ರತಿಭೆಯನ್ನಲ್ಲ. ಕ್ರೀಡೆಯಲ್ಲಿ ಸದಾ ಸುಧಾರಣೆಗೆ ಅವಕಾಶವಿರುತ್ತದೆ" ಎಂದು ಸ್ಫೂರ್ತಿ ತುಂಬಿದರು.

ಕ್ರೀಡಾಕೂಟವನ್ನು ಆಯೋಜಿಸಿದ ಸಂಸ್ಥೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯವಸ್ಥೆಯನ್ನು ಶ್ಲಾಘಿಸಿದ ಅವರು, ಕ್ರೀಡಾಪಟುಗಳು ಮುಕ್ತ ಮನಸ್ಸಿನಿಂದ ಆಟವನ್ನು ಆನಂದಿಸಿ, ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಬೇಕೆಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ವಿದ್ಯಾರ್ಥಿಗಳಿಗೆ ಹಾರೈಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ (ಡಿಡಿಪಿಐ) ಆರ್. ಎಸ್. ಬುರಡಿ ಮಾತನಾಡಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಶಿಕ್ಷಣ ಮತ್ತು ರಕ್ಷಣೆಯ ಜೊತೆಗೆ ಕ್ರೀಡೆಗಳು ಅತ್ಯಂತ ಅಗತ್ಯ. ಕ್ರೀಡಾ ಚಟುವಟಿಕೆಗಳು ಮಕ್ಕಳಲ್ಲಿ ಶಿಸ್ತು, ಸಮಯ ಪಾಲನೆ, ಸಮನ್ವಯತೆ ಸಕ್ರಿಯ ಭಾಗಿತ್ವ ಹಾಗೂ ಸೋಲನ್ನು ಮೆಟ್ಟಿ ನಿಲ್ಲುವ ಆತ್ಮವಿಶ್ವಾಸವನ್ನು ಬೆಳೆಸುತ್ತವೆ" ಎಂದು ಹೇಳಿದರು.

ಕ್ರೀಡೆಗಳಲ್ಲಿ ತೊಡಗಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಸುವುದಲ್ಲದೆ, ದುರಭ್ಯಾಸಗಳಿಂದ ದೂರವಿರಲು ಸಾಧ್ಯವಾಗುತ್ತದೆ. ಕ್ರೀಡೆಯು ನಿಯಮಬದ್ಧ ಶಿಸ್ತು ಹಾಗೂ ಸಮಯ ಪ್ರಜ್ಞೆಯನ್ನು ಕಲಿಸುತ್ತದೆ. ಜೀವನದಲ್ಲಿ ಎದುರಾಗುವ ಸೋಲಿನಿಂದ ಹೇಗೆ ಹೊರಬಂದು ಮತ್ತೆ ಸಾಧನೆ ಮಾಡಬೇಕೆಂಬ ಆತ್ಮವಿಶ್ವಾಸವನ್ನು ನೀಡುತ್ತದೆ ಎಂದರು.



ಶಾಲಾ, ತಾಲೂಕು ಮತ್ತು ಜಿಲ್ಲಾ ಮಟ್ಟವನ್ನು ದಾಟಿ ವಿಭಾಗ ಮಟ್ಟಕ್ಕೆ ಬಂದಿರುವ ಕ್ರೀಡಾಪಟುಗಳು ಮುಂದೆ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಧ್ವಜವನ್ನು ಎತ್ತಿ ಹಿಡಿಯುವ ಮಟ್ಟಕ್ಕೆ ಬೆಳೆಯಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಜಿಲ್ಲಾ ಮಟ್ಟದಲ್ಲಿ ವಿಜೇತರಾಗಿ ಬಂದಿರುವ ಎಲ್ಲಾ ಕ್ರೀಡಾಪಟುಗಳು ಕ್ರೀಡಾ ನಿಯಮಗಳಿಗೆ ಬದ್ಧರಾಗಿ, ಸೌಹಾರ್ದಯುತವಾಗಿ ಪಂದ್ಯಗಳಲ್ಲಿ ಭಾಗವಹಿಸಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್. ಎಸ್. ಬುರಡಿ ಆಶಿಸಿದರು.

ಕೆಕೆಪಿಪಿಜಿ ಸಂಗೀತ ಪಾಠ ಶಾಲೆಯ ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಗೀತೆ ಮತ್ತು ನಾಡಗೀತೆ ಪ್ರಸ್ತುತ ಪಡಿಸಿದರು. ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್.ಎಸ್ ಬುರಡಿ ಸರ್ವರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಎಮ್.ಎಸ್. ಕುಚಬಾಳ ನಿರೂಪಿಸಿದರು. ಶಿವಕುಮಾರ ಕುರಿಯವರು ಕಾರ್ಯಕ್ರಮವನ್ನು ವಂದಿಸಿದರು.

ಈ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಗಂಗಪ್ಪ ಎಂ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ, ಡಿವೈಪಿಸಿ ಎಮ್.ಎಚ್. ಕಂಬಳಿ, ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಎಸ್. ಡಿ. ಕನವಳ್ಳಿ, ಡಿ ವೈ ಪಿ ಸಿ. ರವಿ ಪ್ರಕಾಶ, ಡಿಪಿಓ ಶ್ರೀಮತಿ ಗಾಯಿತ್ರಿ ದೇವಿ ಎಮ್, ಬಿಇಓ ವಿ.ವಿ ನಡುವಿನ ಮನಿ, ಇಓ ಎಮ್.ಪಿ ಗೊಟೂರು, ಲೊಯಲಾ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಲೆವಿನಾ, ಎಚ್.ಬಿ. ರಡ್ಡೆರ, ಎಮ್ ಎಚ್. ಸವದತ್ತಿ, ಲೊಯಲಾ ವೆನಿಗ್ನಾ, ಸೇರಿದಂತೆ ತಾಲೂಕಿನ ಎಲ್ಲಾ ದೈಹಿಕ ಶಿಕ್ಷಕರು ವಿವಿಧ ಶಾಲೆಗಳ ಕ್ರೀಡಾಪಟುಗಳು,ತರಬೇತುದಾರರು, ಶಿಕ್ಷಕರು ಹಾಗೂ ಸಂಘಟಕರು ಉಪಸ್ಥಿತರಿದ್ದರು.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114